April-2025 to March-2026

# CMDR'S Media Coverage

## Special Lecture on Research Methods and Technics

## Date : 16th May 2025

ಸಂಶೋಧನಾ ವಿಧಾನ ರಾಜ್ಯ ಮಟ್ಟದ ಕಾರ್ಯಾಗಾರ

### ಸಂಶೋಧನಾ ಪ್ರಬಂಧ ವಿದ್ವತ್ಪೂರ್ಣ ಬರವಣಿಗೆ



ಧಾರವಾಡ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ ಸಂಶೋಧನಾ ವಿಧಾನ ಕುರಿತಾದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಪ್ರೊ.ಬಸವಪ್ರಭು ಜಿರ್ಲಿ ಹಾಗೂ ಗಣ್ಯರು ಉದ್ಘಾಟಿಸಿದರು.

■ ವಿಕ ಸುದ್ದಿಲೋಕ ಧಾರವಾಡ

ಸಂಶೋಧನೆ ಎಂದರೆ ಯಾವುದೇ ವಿಷಯದ ಬಗ್ಗೆ ವಿಮರ್ಶಾತ್ಮಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ವಿಚಾರಣೆ ಮಾಡುವ ಹೊಸ ಸಿದ್ಧಾಂತಗಳನ್ನು ಬೆಳಕಿಗೆ ತರುವ ಪ್ರಕ್ರಿಯೆಯಾಗಿದೆ ಎಂದು ಸಿ.ಎಂ.ಡಿ.ಆರ್.ನ ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ತಿಳಿಸಿದರು.

ನಗರದ ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾ ವಿದ್ಯಾಲಯದಲ್ಲಿ, ಸಂಶೋಧನಾ ವಿಧಾನ ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಂಶೋಧನಾ ಪ್ರಬಂಧವು ಆಳವಾದ ಶೋಧನೆ, ವ್ಯಾಖ್ಯಾನ ಮತ್ತು ವಿಶ್ಲೇಷಣೆಯನ್ನು ಒಳಗೊಂಡಿರುವ ಒಂದು ವಿದ್ವತ್ಪೂರ್ಣ ಬರವಣಿಗೆಯಾಗಿದೆ. ಸಂಶೋಧನಾ ಪ್ರಕಾರಗಳಲ್ಲಿ ಮೂಲಭೂತ ಸಂಶೋಧನೆ ಮತ್ತು ಅನ್ವಯಿಕ ಸಂಶೋಧನೆಗಳು ಸಮಾಜ-ವಿಜ್ಞಾನಗಳ ವಿಷಯದಲ್ಲಿ ಬಹಳ ಪ್ರಮುಖವಾದಂತವು. ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸಂಶೋಧನಾ ವಿಧಾನವನ್ನು ಅರಿಯಬೇಕು ಎಂದು ತಿಳಿಸಿದರು.

**ಗುಣಾತ್ಮಕ, ಪರಿಮಾಣಾತ್ಮಕ ಸಂಶೋಧನಾ ವಿಧಾನ ತಿಳಿಯಿರಿ**

ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರೊ.ಶೌಕತ್ ಅಜೀಮ್ ಮಾತನಾಡಿ, ಸಂಶೋಧನೆ ಎಂದರೆ ಕೇವಲ ಮಾಹಿತಿ ಸಂಗ್ರಹಿಸುವುದಲ್ಲ, ಅದು ಸತ್ಯವನ್ನು ಮೌಲ್ಯಮಾಪನ ಮಾಡುವಂತದ್ದು. ಸಂಶೋಧನೆಯು ಪ್ರಾಯೋಗಿಕ ಮತ್ತು ಅನುಭವಾತ್ಮಕವಾಗಿ ಸಾಮಾಜಿಕ ಆಯುಧವಾಗ ಬೇಕು ಎಂದು ಅವರು ಹೇಳಿದರು. ಚಾಟ್ ಜಿ.ಪಿ.ಟಿ., ಎ.ಐ., ಮೆಟಾ ಮುಂತಾದ ತಂತ್ರಜ್ಞಾನಗಳ ಬಳಕೆ ಸಂಶೋಧನೆಯಲ್ಲಿ ಸಹಾಯಕವಾಗಿವೆ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ವಿವಿ ಗ್ರಂಥ ವಿಜ್ಞಾನ ವಿಭಾಗದ ಪ್ರೊ.ಗುರುರಾಜ ಹಡಗಲಿ, ಸಹಾಯಕ ಪ್ರಾಧ್ಯಾಪಕಡಾ.ಎಸ್.ವಿ.ಹನಗೋಡಿಮಠ, ಪ್ರಾಚಾರ್ಯ ಡಾ.ನೀಲಕ್ಕ ಪಾಟೀಲ, ಶಾಂಭವಿ ಕುಲಕರ್ಣಿ, ಪ್ರೊ.ನಾಗರಾಜ ಕೋಟಗಾರ, ಪ್ರೊ.ರಾಶಿ ತಾಲಂಕೆ, ಪ್ರೊ. ಶಶಿಧರ ಚಿಕ್ಕಮಠ, ಡಾ.ಸುರೇಶ್ ಸಂಕಣ್ಣವರ್ ಇದ್ದರು.

### 'Research needs in-depth interpretation, analysis'

**Workshop on research methodology held**

DHARWAD, DHNS

Centre for Multi-disciplinary Development Research (CMDR) Director Basavaprabhu Jirli stated that research is the *systematic investigation and study of materials and sources in order to establish facts and reach new conclusions.*

"A research paper is a scholarly piece of writing that involves in-depth research, interpretation and analysis," he added.

He noted this while speaking after inaugurating a workshop on Research Methodology, organised at KLE Society's Mrityunjaya College of Arts and Commerce in Dharwad.

Further, he elaborated qualitative and quantitative methods. He highlighted about basic research and applied research. Observation is important in research, he added.

**'A social weapon'**

Prof Shaukat Azim in his keynote address stated that research is not mere collecting information; it is an evaluation of facts. Research is experimental and experiential. Further, he stated that research should become a social weapon. He called upon the students to undertake case studies.

**Statistical tool**

Dr Gururaj Hadagali focused on contents of the Research Design. It refers to the overall strategy utilised to integrate the different components of the study in a coherent and logical way. Further, he elaborated the types of research design, such as descriptive, co-relational, experimental and diagnostic. He has explained the different statistical tools for data interpretation.

Dr Neelakka Patil presiding over the workshop said that this kind of workshop will help students to carry out quality research work and also project work, which is mandatory for final semester students. Input given by invited resource persons will instill the students to undertake research work in social science and also to enrich their knowledge.



Centre for Multi-disciplinary Development Research Director Basavaprabhu Jirli inaugurates a workshop on Research Methodology, organised at KLE Society's Mrityunjaya College of Arts and Commerce in Dharwad. DH PHOTO

ಉದಯವಾಣಿ

ಜನಮನದ ಜೀವನಾಡಿ

II ಉದಯವಾಣಿ ಹುಬ್ಬಳ್ಳಿ

ಶುಕ್ರವಾರ, ಮೇ 16, 2025

### 'ಸಂಶೋಧನೆ ಹೊಸ ಸಿದ್ಧಾಂತ ಬೆಳಕಿಗೆ ತರುವ ಪ್ರಕ್ರಿಯೆ'

■ ಉದಯವಾಣಿ ಸಮಾಚಾರ

[illegible]



ಧಾರವಾಡ: ಕೆಎಲ್‌ಇ ಮೃತ್ಯುಂಜಯ ಕಾಲೇಜಿನಲ್ಲಿ ಸಂಶೋಧನೆ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಗಣ್ಯರು ಉದ್ಘಾಟಿಸಿದರು.

[illegible]

# CMDR'S Media Coverage

## Report of the Workshop on Life Skills
## Date : 26th and 27th May 2025

### CMDR holds workshop on life skills

DHARWAD, DHNS: One should understand one's strengths, weaknesses, emotions, and motivations as well as how to express oneself clearly and also listen actively, said CMDR Director Basavaprabhu Jirli.

Inaugurating the workshop on 'Life Skills' organised for students from PUC to PhD scholars at Centre for Multi-Disciplinary Research (CMDR) in Dharwad, he said this helps individuals to think critically, evaluate situations, and make sound choices.

Jirli said, the workshop has been organised to build confidence, resilience, and improve the ability to handle relationships. He opined that life skills workshops provide practical tools to thrive in a fast-changing world whether for students, professionals, or anyone looking to grow.

The workshop focussed on skills like communication, decision-making, stress management, and adaptability, which aren't always taught in the classroom but are crucial for success in professional life.

After attending the workshop, participants expressed that the learning will help them in personal and professional success in ways that go far beyond the short-term lessons. Participants revealed that they developed the ability to express themselves clearly, listen actively, and navigate conversations with confidence.

Dr Pratil Mali, Dr Dundappa Y B, Dr Jai Prabhakar, Prof Bramhanandam T, Dr A R Kulkarni, and others were present at the workshop.

# CMDR'S Media Coverage

## Special Lecture on Research Type and Quality of Reports - Date : 9th June 2025

### "ಒಂದು ರಾಷ್ಟ್ರ, ಒಂದು ಚಂದಾದಾರಿಕೆ ಸಂಶೋಧನೆಯಲ್ಲಿ ಹೊಸತನವನ್ನು ಸಕ್ರಿಯಗೊಳಿಸುತ್ತದೆ": ಪ್ರೊ. ಆರ್ ಆರ್ ಬಿರಾದಾರ್



ಕಲಬುರಗಿ:ಜು.10:"ಸಮಾಜ ವಿಜ್ಞಾನದಲ್ಲಿ ಯುವ ಅಧ್ಯಾಪಕ ಸದಸ್ಯರಿಗೆ ಸಂಶೋಧನಾ ವಿಧಾನ ಮತ್ತು ಗುಣಮಟ್ಟ ಪ್ರಕಟಣೆ" ಕುರಿತು ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ (ಅಃಕ)ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ರಿಜಿಸ್ಟ್ರಾರ್ ಪ್ರೊ. ಆರ್ ಆರ್ ಬಿರಾದಾರ್, 'ಒಂದು ರಾಷ್ಟ್ರ, ಒಂದು ಚಂದಾದಾರಿಕೆ' ನಮಗೆ 30000 ಕ್ಕೂ ಹೆಚ್ಚು ಪ್ರಕಾಶಕರನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ ಮತ್ತು 13000 ಜರ್ನಲ್ಗಳನ್ನು ಉಚಿತವಾಗಿ ಪ್ರವೇಶಿಸಬಹುದು. ವೈಜ್ಞಾನಿಕ ಪ್ರಕಟಣೆಯಲ್ಲಿ ಭಾರತೀಯರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಆದರೆ ಉಲ್ಲೇಖದಲ್ಲಿ ಇದು ಒಂಬತ್ತನೇ ಸ್ಥಾನದಲ್ಲಿದೆ. ಆದ್ದರಿಂದ, ಕಾರ್ಯಸಾಧ್ಯತೆ, ನವೀನತೆ, ನೈತಿಕ ಮತ್ತು ಸಮಾಜಕ್ಕೆ ಪ್ರಸ್ತುತತೆಯೊಂದಿಗೆ ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸುವ ಸಮಯ ಇದು." ಎಂದು ಹೇಳಿದರು.

"ಸಂಶೋಧನೆಯ ಗುಣಮಟ್ಟವು ಉನ್ನತ ಶಿಕ್ಷಣದ ಭವಿಷ್ಯವನ್ನು ನಿರ್ಧರಿಸುತ್ತದೆ. ಈ ಕಾರ್ಯಕ್ರಮವು ಸಂಶೋಧನೆ ಮತ್ತು ಸಮಾಜವನ್ನು ದೊಡ್ಡಪ್ರಮಾಣದಲ್ಲಿ ಸಂಪರ್ಕಿಸುತ್ತದೆ" ಎಂದು ಶಿಕ್ಷಣ ಮತ್ತು ತರಬೇತಿ ಶಾಲೆಯ ಶಿಕ್ಷಣ ಇಲಾಖೆಯ ಕಾರ್ಯಕ್ರಮ ನಿರ್ದೇಶಕರಾದ ಐಸಿಎ□□□□□□ರ್-ಸಿಬಿಪಿಯ ಪ್ರೊ. ಜಿ ಆರ್ ಅಂಗಡಿ ಹೇಳಿದರು.

ಧಾರವಾಡದ ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರದ (ಅಒಆಖ) ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ, "ರಾಷ್ಟ್ರ ನಿರ್ಮಾಣದಲ್ಲಿ ಸಂಶೋಧನೆ ಮತ್ತು ಯುವ ಅಧ್ಯಾಪಕರು ಜ್ಞಾನಕ್ಕೆ ಕೊಡುಗೆ ನೀಡುವಂತೆ ಪ್ರೋತ್ಸಾಹಿಸುವುದು ಇಂದಿನ ಅಗತ್ಯವಾಗಿದೆ ಮತ್ತು ಇದು ಕಠಿಣ ಸಂಶೋಧನಾ ಅಭ್ಯಾಸಗಳನ್ನು ಸೃಷ್ಟಿಸುತ್ತದೆ" ಎಂದು ಹೇಳಿದರು.

ಈ ಕಾರ್ಯಕ್ರಮವು ಜುಲೈ 7 ರಿಂದ ಜುಲೈ 18, 2025 ರವರೆಗೆ ನಿಗದಿಯಾಗಿದ್ದು, ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾ ಸಾಮರ್ಥ್ಯಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ. ವಿವಿಧ ರಾಜ್ಯಗಳ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಭಾಗವಹಿಸುವವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಶೋಧನಾ ವಿದ್ವಾಂಸರು ಸರಸ್ವತಿ ವಂದನೆ ಸಲ್ಲಿಸಿದರು. ಸಿಬಿಪಿಯ ಸಂಯೋಜಕರಾದ ಡಾ. ಕೆ. ತಿಯಾಗು ಧನ್ಯವಾದ ಅರ್ಪಿಸಿದರು.

### ಪತ್ರಕತ

ಕಲಬುರಗಿ:ಜು.10:ಪತ್ರಿಕೋದ್ಯಮ ಕ್ಷೇತ್ರದಲ್ಲಿ ನಿರತರಾದ ಪತ್ರಕರ್ತರು ಮೇಲೆ ಹೆಚ್ಚು ಜವಾಬಾದಾರಿಯಿದೆ. ಸಮಾಜದ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಸಂದರ್ಭದಲ್ಲಿ ವಸ್ತುನಿಷ್ಠವರದಿಗೆ ಆದ್ಯತೆ ನೀಡಬೇಕು. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮಹತ್ವದ ಕೆಲಸವನ್ನು ಪತ್ರಿಕಾರಂಗ ನಿರ್ವಹಿಸುತ್ತಿರುವ ಕಾರಣದಿಂದ ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಕರೆಯಲಾಗಿದೆ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಾಬಣ್ಣ ಹೂವಿನಬಾವಿ ಅಭಿಪ್ರಾಯಪಟ್ಟರು.

ಗ್ ಎ ಲ ಬ ಗಾ ರ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಸಂಶೋಧನಾ ವಿಭಾಗದಲ್ಲಿ ಆಯೋಜಿಸಿದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ...

### ಸಂಶೋಧನೆಯಲ್ಲಿ ಹೊಸತನ ಸಕ್ರಿಯ

ಕಲಬುರಗಿ: ಒಂದು ರಾಷ್ಟ್ರ, ಒಂದು ಚಂದಾದಾರಿಕೆ 30000ಕ್ಕೂ ಅಧಿಕ ಪ್ರಕಾಶಕರನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. 13000 ಜರ್ನಲ್‌ಗಳನ್ನು ಉಚಿತ ಪ್ರವೇಶಿಸಬಹುದು. ವೈಜ್ಞಾನಿಕ ಪ್ರಕಟಣೆಯಲ್ಲಿ ಭಾರತೀಯರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಆದರೆ ಉಲ್ಲೇಖದಲ್ಲಿ ಇದು ಒಂಬತ್ತನೇ ಸ್ಥಾನದಲ್ಲಿದೆ. ಹೀಗಾಗಿ ಕಾರ್ಯಸಾಧ್ಯತೆ, ನವೀನತೆ, ನೈತಿಕ ಮತ್ತು ಸಮಾಜಕ್ಕೆ ಪ್ರಸ್ತುತತೆಯೊಂದಿಗೆ ಸಂಶೋಧನೆ ಗಂಭೀರವಾಗಿ ಪರಿಗಣಿಸುವ ಸಮಯವಿದು ಎಂದು ಕರ್ನಾಟಕ ಕೇಂದ್ರೀಯ ವಿವಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ್ ಹೇಳಿದರು. ಸಮಾಜ ವಿಜ್ಞಾನದಲ್ಲಿ ಯುವ ಅಧ್ಯಾಪಕ ಸದಸ್ಯರಿಗೆ ಸಂಶೋಧನಾ ವಿಧಾನ ಮತ್ತು ಗುಣಮಟ್ಟ ಪ್ರಕಟಣೆ ಕುರಿತು ಸಿಯುಕೆಯಲ್ಲಿ ಬುಧವಾರ ಆಯೋಜಿಸಿದ್ದ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಶೋಧನೆ ಗುಣಮಟ್ಟ ಉನ್ನತ ಶಿಕ್ಷಣದ ಭವಿಷ್ಯ ನಿರ್ಧರಿಸುತ್ತದೆ. ಈ ಕಾರ್ಯಕ್ರಮ ಸಂಶೋಧನೆ ಮತ್ತು ಸಮಾಜವನ್ನು ದೊಡ್ಡ ಪ್ರಮಾಣದಲ್ಲಿ ಸಂಪರ್ಕಿಸುತ್ತದೆ ಎಂದು ನಿರ್ದೇಶಕ ಪ್ರೊ.ಜಿ.ಆರ್.ಅಂಗಡಿ ಹೇಳಿದರು. ಧಾರವಾಡದ ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.



ಸಮಾಜ ವಿಜ್ಞಾನದಲ್ಲಿ ಯುವ ಅಧ್ಯಾಪಕ ಸದಸ್ಯರಿಗೆ ಸಂಶೋಧನಾ ವಿಧಾನ ಮತ್ತು ಗುಣಮಟ್ಟ ಪ್ರಕಟಣೆ ಕುರಿತು ಕೇಂದ್ರೀಯ ವಿವಿಯಲ್ಲಿ ಬುಧವಾರ ಆಯೋಜಿಸಿದ್ದ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮದಲ್ಲಿ ಪ್ರೊ.ಆರ್.ಆರ್.ಬಿರಾದಾರ್, ಪ್ರೊ.ಜಿ.ಆರ್.ಅಂಗಡಿ, ಪ್ರೊ.ಬಸವಪ್ರಭು ಜಿರ್ಲಿ ಇತರರಿದ್ದರು.

ಬಸವಪ್ರಭು ಜಿರ್ಲಿ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಸಂಶೋಧನೆ ಮತ್ತು ಯುವ ಅಧ್ಯಾಪಕರು ಜ್ಞಾನಕ್ಕೆ ಕೊಡುಗೆ ನೀಡುವಂತೆ ಪ್ರೋತ್ಸಾಹಿಸುವುದು ಇಂದಿನ ಅಗತ್ಯ. ಇದು ಕಠಿಣ ಸಂಶೋಧನಾ ಅಭ್ಯಾಸ ಸೃಷ್ಟಿಸುತ್ತದೆ ಎಂದು ಹೇಳಿದರು. ಸರಸ್ವತಿ ಸ್ವಾಗತಿಸಿದರು. ಡಾ.ಕೆ.ತಿಯಾಗು ವಂದಿಸಿದರು.

### ಒಂದು ರಾಷ್ಟ್ರ, ಒಂದು ಚಂದಾದಾರಿಕೆ ಸಂಶೋಧನೆಯಲ್ಲಿ ಹೊಸತನ: ಕುಲಸಚಿವ ಬಿರಾದಾರ್



ಕಲಬುರಗಿ,ಜು.9- ಒಂದು ರಾಷ್ಟ್ರ, ಒಂದು ಚಂದಾದಾರಿಕೆ ನಮಗೆ 30000ಕ್ಕೂ ಹೆಚ್ಚು ಪ್ರಕಾಶಕರನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ ಮತ್ತು 13000 ಜರ್ನಲ್ ಗಳನ್ನು ಉಚಿತವಾಗಿ ಪ್ರವೇಶಿ ಸಬಹುದು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್ ಅವರು ಹೇಳಿದರು.

ಜಿಲ್ಲೆಯ ಆಳಂದ್ ತಾಲ್ಲೂಕಿನ ಕಡಗಂಚಿ ಬಳಿ ಇರುವ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಬುಧವಾರ ಸಮಾಜ ವಿಜ್ಞಾನದಲ್ಲಿ ಯುವ ಅಧ್ಯಾಪಕ ಸದಸ್ಯರಿಗೆ ಸಂಶೋಧನಾ ವಿಧಾನ ಮತ್ತು ಗುಣಮಟ್ಟ ಪ್ರಕಟಣೆ ಕುರಿತು ಸಾಮರ್ಥ್ಯ ವೃದ್ಧಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ವೈಜ್ಞಾನಿಕ ಪ್ರಕಟಣೆ ಯಲ್ಲಿ ಭಾರತೀಯರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಆದರೆ ಉಲ್ಲೇಖದಲ್ಲಿ ಇದು ಒಂಬತ್ತನೇ ಸ್ಥಾನದಲ್ಲಿದೆ. ಆದ್ದರಿಂದ, ಕಾರ್ಯಸಾಧ್ಯತೆ, ನವೀನತೆ, ನೈತಿಕ ಮತ್ತು ಸಮಾಜಕ್ಕೆ ಪ್ರಸ್ತುತತೆಯೊಂದಿಗೆ ಸಂಶೋ ಧನೆಯನ್ನು ಗಂಭೀರವಾಗಿ ಪರಿಗಣಿಸುವ ಸಮಯ ಇದು ಎಂದರು.

ಶಿಕ್ಷಣ ಮತ್ತು ತರಬೇತಿ ಶಾಲೆಯ ಶಿಕ್ಷಣ ಇಲಾಖೆಯ ಕಾರ್ಯಕ್ರಮ ನಿರ್ದೇಶಕ ಐಸಿಎಸ್ಎಸ್ಆರ್-ಸಿಬಿಪಿಯ ಪ್ರೊ. ಜಿ.ಆರ್. ಅಂಗಡಿ ಅವರು ಮಾತನಾಡಿ, ಸಂಶೋಧನೆಯ ಗುಣಮಟ್ಟವು ಉನ್ನತ ಶಿಕ್ಷಣದ ಭವಿಷ್ಯವನ್ನು ನಿರ್ಧರಿಸುತ್ತದೆ. ಈ ಕಾರ್ಯ ಕ್ರಮವು ಸಂಶೋಧನೆ ಮತ್ತು ಸಮಾಜವನ್ನು ದೊಡ್ಡ ಪ್ರಮಾಣದಲ್ಲಿ ಸಂಪರ್ಕಿಸುತ್ತದೆ ಎಂದರು.

ಧಾರವಾಡದ ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ಅವರು ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಸಂಶೋಧನೆ ಮತ್ತು ಯುವ ಅಧ್ಯಾಪಕರು ಜ್ಞಾನಕ್ಕೆ ಕೊಡುಗೆ ನೀಡುವಂತೆ ಪ್ರೋತ್ಸಾಹಿಸುವುದು ಇಂದಿನ ಅಗತ್ಯವಾಗಿದೆ ಮತ್ತು ಇದು ಕಠಿಣ ಸಂಶೋಧನಾ ಅಭ್ಯಾಸಗಳನ್ನು ಸೃಷ್ಟಿಸುತ್ತದೆ. ಕಾರ್ಯ ಕ್ರಮವು ಜುಲೈ 7ರಿಂದ ಜುಲೈ 18ರವರೆಗೆ ನಿಗದಿಯಾಗಿದ್ದು, ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾ ಸಾಮರ್ಥ್ಯ ಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ ಎಂದರು.

ವಿವಿಧ ರಾಜ್ಯಗಳ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂಶೋಧನಾ ವಿದ್ವಾಂಸರು ಸರಸ್ವತಿ ವಂದನೆ ಸಲ್ಲಿಸಿದರು. ಸಿಬಿಪಿಯ ಸಂಯೋಜಕ ಡಾ. ಕೆ. ತಿಯಾಗು ಅವರು ವಂದಿಸಿದರು.

Printed, Published, Edited & Owned By MALLIKARJUN V.N. Publihsed
At M/S. THREE STAR PRINTING PRESS, Plot No. 01, Sy. No. 24, Near Hirapur Railw

April-2025 to March-2026

# CMDR'S Media Coverage

## Anti Doping Awareness for Sports Persons – Date :30th July 2025

**ಹೊಸ ದಿಗಂತ**

### ಔಷಧಗಳ ಬಳಕೆಗೆ ಜ್ಞಾನ ಅಗತ್ಯ



**ಸಂಯುಕ್ತ ಕರ್ನಾಟಕ**

### ಕ್ರೀಡಾಪಟುಗಳಿಗೆ ಔಷಧಿಗಳ ಅರಿವು ಮುಖ್ಯ

ಧಾರವಾಡದ ಕರ್ನಾಟಕ ಕಾಲೇಜು ವಿಜಯ ಭವನ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ರೀಡಾ ವೈದ್ಯ ಡಾ. ಕಿರಣ್‌ಕುಮಾರ್ ಕುಲಕರ್ಣಿ, ಸಿಎಂಡಿಆರ್‌ನ ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ಮತ್ತಿತರರಿದ್ದರು.



Hubli Edition
Aug 07, 2025 Page No. 02
Powered by: erelego.com

**ವಿಶ್ವವಾಣಿ**

### ಕ್ರೀಡಾಪಟುಗಳಿಗೆ ಡೋಪಿಂಗ್ ವಿರೋಧಿ ಜಾಗೃತಿ



### ಔಷಧಿಗಳ ಬಳಕೆಯ ಬಗ್ಗೆ ಕ್ರೀಡಾಪಟುಗಳು, ಕ್ರೀಡಾ ತರಬೇತುದಾರರು ಜಾಗರೂಕತೆಯಿಂದ ಇರಬೇಕು: ಡಾ. ಕಿರಣ್ ಕುಮಾರ್ ಕುಲಕರ್ಣಿ




### ಔಷಧಿಗಳ ಬಳಕೆಯ ಬಗ್ಗೆ ಕ್ರೀಡಾಪಟುಗಳು, ಕ್ರೀಡಾ ತರಬೇತುದಾರರು ಜಾಗರೂಕತೆಯಿಂದ ಇರಬೇಕು: ಡಾ. ಕಿರಣ್ ಕುಮಾರ್ ಕುಲಕರ್ಣಿ




**ಇಂದು ಮುಂಜಾನೆ**

### ಔಷಧಿಗಳ ಬಳಕೆಯ ಬಗ್ಗೆ ಕ್ರೀಡಾಪಟುಗಳು , ತರಬೇತುದಾರರು ಜಾಗರೂಕರಾಗಿರಬೇಕು : ಡಾ. ಕಿರಣಕುಮಾರ



**ಸಾಗರ ಸಾಮ್ರಾಟ**

### ಔಷಧಿಗಳ ಬಳಕೆ ಕ್ರೀಡಾಪಟುಗಳು, ತರಬೇತುದಾರರು ಜಾಗರೂಕತೆ ವಹಿಸಬೇಕು: ಕುಲಕರ್ಣಿ



# CMDR'S Media Coverage

## Special Lecture on Direct Marketing A Tool for Development for Farmers- Date- 29th October, 2025



ಉದಯವಾಣಿ

ಬುಧವಾರ, ಅಕ್ಟೋಬರ್ 29, 2025

### ಮಾರುಕಟ್ಟೆ ರೈತನ ಶ್ರಮಕ್ಕೆ ಗೌರವ ಸಲ್ಲಿಸುವ ವೇದಿಕೆ: ಸುರೇಶ್

#### ಜಿಕೆವಿಕೆಯಲ್ಲಿ ರೈತರ ಸಬಲೀಕರಣಕ್ಕಾಗಿ ನೇರ ಮಾರುಕಟ್ಟೆ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಮಾರುಕಟ್ಟೆ ಎಂದರೆ ಕೇವಲ ಮಾರಾಟದ ವೇದಿಕೆಯಲ್ಲ ಬದಲಾಗಿ ರೈತನ ಶ್ರಮಕ್ಕೆ ಗೌರವ ಸಲ್ಲಿಸುವ ವೇದಿಕೆ. ನಿಷ್ಠೆ ಪಾರದರ್ಶಕತೆ ಮತ್ತು ನ್ಯಾಯಬೆಲೆಯ ಮೂಲಕ ಕೃಷಿ ಮಾರುಕಟ್ಟೆ ರೈತನ ಜೀವನದಲ್ಲಿ ನವಚೈತನ್ಯ ತುಂಬಲಿದೆ ಎಂದು ಕೃಷಿ ವಿವಿ ಕುಲಪತಿ ಡಾ. ಎಸ್. ವಿ. ಸುರೇಶ್ ಹೇಳಿದರು.

ಹೆಬ್ಬಾಳದ ಜಿಕೆವಿಕೆ ರೈತ ತರಬೇತಿ ಸಂಸ್ಥೆಯಲ್ಲಿ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಧಾರವಾಡ ಸಹಯೋಗದಲ್ಲಿ 2 ದಿನಗಳು ಏರ್ಪಡಿಸಿದ್ದ ರೈತರ ಸಬಲೀಕರಣಕ್ಕಾಗಿ ನೇರ ಮಾರುಕಟ್ಟೆ ಒಂದು ಸಾಧನ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೈತರು ತಮ್ಮ ಬೆಳೆಯನ್ನು ಸಂಸ್ಕರಿಸಿ, ಮೌಲ್ಯ ವರ್ಧನೆ ಮಾಡಿ ನೇರ ಮಾರಾಟ ಮಾಡಿದಾಗ ...

ನೇರ ಮಾರುಕಟ್ಟೆ ಕುರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ನಡೆಯಿತು.



ಪ್ರಜಾ ಪ್ರಗತಿ

### ರೈತರ ಸಬಲೀಕರಣಕ್ಕಾಗಿ ಕೌಶಲ್ಯಾಭಿವೃದ್ಧಿ ತರಬೇತಿ

● ಪ್ರಜಾಪ್ರಗತಿ. ಕಾಂ

ಮಾಗಡಿ: ರೈತರು ತಮ್ಮ ಬೆಳೆಯನ್ನು ಸಂಸ್ಕರಿಸಿ, ಮೌಲ್ಯವರ್ಧನೆ ಮಾಡಿ ನೇರ ಮಾರಾಟ ಮಾಡಿದಾಗ ಮಾತ್ರ ಹೆಚ್ಚಿನ ಆದಾಯಗಳಿಸಲು ಸಾಧ್ಯ ಹಾಗೂ ಬೇಡಿಕೆ ಮತ್ತು ಪೂರೈಕೆಯ ಅಗತ್ಯತೆ ಕುರಿತು ಮಾರಾಟ ಮಾಡಬೇಕು ಹಾಗೂ ಮಾರಾಟದಲ್ಲಿ ನಾವಿನ್ಯತೆ ಇರಬೇಕು ಮತ್ತು ಗ್ರಾಹಕರಿಗೆ ಅಗತ್ಯತೆಗೆ ತಕ್ಕಂತೆ ಉತ್ಪನ್ನಗಳನ್ನು ಪೂರೈಸಿದರೆ ಗ್ರಾಹಕರೇ ತಮ್ಮನ್ನು ಹುಡುಕಿಕೊಂಡು ಬರುತ್ತಾರೆಂದು ತಿಳಿಸುತ್ತಾ ತರಬೇತಿಯ ಸದುಪಯೋಗ ಪಡಿಸಿಕೊಂಡು ಹೆಚ್ಚಿನ ಆದಾಯ ಗಳಿಸುವಂತಾಗಬೇಕು ಎಂದು ಕೃಷಿ ವಿವಿ ಕುಲಪತಿ ಡಾ.ಎಸ್.ವಿ,ಸುರೇಶ್ ತಿಳಿಸಿದರು.

ಜಿಕೆವಿಕೆ ಮತ್ತು ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಧಾರವಾಡ ಇವರ ಸಹಯೋಗದೊಂದಿಗೆ ಎರಡು ದಿನಗಳ ರೈತರ ಸಬಲೀಕರಣಕ್ಕಾಗಿ ನೇರ ಮಾರುಕಟ್ಟೆ ಒಂದು ಸಾಧನಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಶ್ವವಿದ್ಯಾನಿಲಯ ಮಾನ್ಯ ಕುಲಪತಿ ಡಾ. ಎಸ್. ವಿ. ಸುರೇಶ ಜ್ಯೋತಿ ಬೆಳಗುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಬಸವಪ್ರಭು ಜಿರ್ಲಿ ಮಾತನಾಡಿ ಕೇಂದ್ರದಿಂದ ರೈತರಿಗೆ ನೀಡಲಾಗಿರುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಿ ರೈತರಿಗೆ ಅಗತ್ಯ ಜ್ಞಾನವನ್ನು ನೀಡಿ ಅವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ರೈತರಿಗೆ ಮಾರುಕಟ್ಟೆ ಜ್ಞಾನ ಅವಶ್ಯಕತೆ ಇದ್ದು ನೇರ ಮಾರಾಟ ಮಾಡುವುದರಿಂದ ರೈತರು ತಮ್ಮ ಬೆಳೆಗೆ ತಾವೇ ಬೆಲೆ ನಿರ್ಧರಿಸಲು ಸಾಧ್ಯ ಎಂದು ತಿಳಿಸಿ ಕಾರ್ಯಕ್ರಮಕ್ಕೆ ಎಲ್ಲರನ್ನು ...

Bangalore Edition

Oct 30, 2025 Page No. 9

Powered by: erelego.com



THE HINDU

Wednesday, October 29, 2025

### Two-day training programme

**The Hindu Bureau**
BENGALURU

The University of Agricultural Sciences, GKVK, Bengaluru, jointly with the Directorate of Extension, the Farmers' Training Institute, and the Multidisciplinary Development Research Centre (MDRC), Dharwad inaugurated a two-day skill development training programme on "Direct Marketing as a Tool for Farmer Empowerment" on Tuesday.

As many as 30 farmers, farm women and Krishi Sakhis from various districts participated.



THE HINDU

Wednesday, October 29, 2025

### Two-day training programme

**The Hindu Bureau**
BENGALURU

The University of Agricultural Sciences, GKVK, Bengaluru, jointly with the Directorate of Extension, the Farmers' Training Institute, and the Multidisciplinary Development Research Centre (MDRC), Dharwad inaugurated a two-day skill development training programme on "Direct Marketing as a Tool for Farmer Empowerment" on Tuesday.

As many as 30 farmers, farm women and Krishi Sakhis from various districts participated.



### ಮಾರುಕಟ್ಟೆ ರೈತನ ಶ್ರಮಕ್ಕೆ ಗೌರವ ಸಲ್ಲಿಸುವ ವೇದಿಕೆ: ಸುರೇಶ್

#### ಜಿಕೆವಿಕೆಯಲ್ಲಿ ರೈತರ ಸಬಲೀಕರಣಕ್ಕಾಗಿ ನೇರ ಮಾರುಕಟ್ಟೆ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

■ ಉದಯವಾಣಿ ಸಮಾಚಾರ

ನೇರ ಮಾರುಕಟ್ಟೆ ಕುರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ನಡೆಯಿತು.

### ಬೆಂಗಳೂರು ಕೃಷಿ ವಿವಿ ಕೃಷಿ ಮೇಳ: 5 ಸಾಧಕ ರೈತರಿಗೆ ರಾಜ್ಯಮಟ್ಟದ ಪ್ರಶಸ್ತಿ

ಒಟ್ಟು 91 ಮಂದಿಗೆ ಪುರಸ್ಕಾರ | ನ.13ರಿಂದ 16ರವರೆಗೆ ಪ್ರಶಸ್ತಿ ಪ್ರದಾನ

■ ಉದಯವಾಣಿ ಸಮಾಚಾರ

### ಎಸಿಪಿಇ ಬೆಂಗಳೂರು ಕೇಂದ್ರಕ್ಕೆ ಸವೀನ ತೀರ್ಥಹಳ್ಳಿ ಅಧ್ಯಕ್ಷ

■ ಉದಯವಾಣಿ ಸಮಾಚಾರ

# CMDR'S Media Coverage

## Special Lecture on Research and contemplation towards development – Date – 13th November,2025

ನಂ.1 ವಿಜಯವಾಣಿ
ಕನ್ನಡ ದಿನಪತ್ರಿಕೆ
ಗುರುವಾರ 13 ನವೆಂಬರ್ 2025
13 NOVEMBER 2025

### ಬೈಂದೂರು ಕಾಲೇಜಿನಲ್ಲಿ ವಿಶೇಷ ಕಾರ್ಯಾಗಾರ

**ಬೈಂದೂರು:** ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಶೋಧನಾ ಕೋಶ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳಿಗಾಗಿ 'ಸಂಶೋಧನೆ: ವಿಚಾರದಿಂದ ವಿಕಾಸದ ಕಡೆಗೆ' ಎಂಬ ಒಂದು ದಿನದ ವಿಶೇಷ ಕಾರ್ಯಾಗಾರ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಸಂಶೋಧನಾ ಮಾರ್ಗದರ್ಶಕ (ಸಿಎಂಡಿಆರ್) ಡಾ.ಎಸ್ .ವಿ.ಹನಗೋಡಿಮಠ ಧಾರವಾಡ ಉಪನ್ಯಾಸ ನೀಡಿ, ಸಂಶೋಧನೆಯಲ್ಲಿ ಪ್ರಾಥಮಿಕ ದತ್ತಾಂಶ ಸಂಗ್ರಹಣೆಯಲ್ಲಿ ಬಳಸುವ ಕೆಒಬಿಒ ಕಲೆಕ್ಟ್ ಟೂಲ್‌ಬಾಕ್ಸ್ ಬಳಕೆ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ನಾಗರಾಜ ಶೆಟ್ಟಿ ಕಾರ್ಯಾಗಾರ ಉದ್ಘಾಟಿಸಿ ಶುಭಹಾರೈಸಿದರು. ಸಂಶೋಧನಾ ಕೋಶದ ಸಂಚಾಲಕಿ ಗೀತಾ ಸಂದಿಗೋಡಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಗಳಾದ ಹರ್ಷಿತಾ ಪ್ರಾರ್ಥಿಸಿದರು. ಸುಕುಮಾರ ಸ್ವಾಗತಿಸಿದರು. ಕೀರ್ತಿ ವಂದಿಸಿದರು. ಚೈತ್ರಾ ನಿರೂಪಿಸಿದರು.



ಬೈಂದೂರು ಡಿಗ್ರಿ ಕಾಲೇಜಿನಲ್ಲಿ ಆಯೋಜಿಸಲಾದ ವಿಶೇಷ ಕಾರ್ಯಾಗಾರಕ್ಕೆ ನಾಗರಾಜ ಶೆಟ್ಟಿ ಚಾಲನೆ ನೀಡಿದರು. ಡಾ.ಎಸ್.ವಿ.ಹನಗೋಡಿಮಠ ಧಾರವಾಡ, ಗೀತಾ ಮೊದಲಾದವರು ಇದ್ದರು

CMDR
सा विद्या या विमुक्तये

# CMDR'S Media Coverage

## Two Day National level Research Methodology Course
## 30th October and 1st November, 2025


ಸುವರ್ಣ ವಾಹಿನಿ

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ: ಸುರೇಂದ್ರ ಕುಮಾರ್


ಸುದ್ದಿಮೂಲ

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ


ಲೋಕಧ್ವನಿ

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ


ವಿಜಯ ಕರ್ನಾಟಕ

ರಾಷ್ಟ್ರೀಯ ಕಾರ್ಯಾಗಾರದಲ್ಲಿ ಪ್ರೊ.ಎಸ್.ವೈ.ಸುರೇಂದ್ರ ಕುಮಾರ್ ಹೇಳಿಕೆ

ಸಂಶೋಧನಾ ಸಾಧನೆ ಉತ್ಕೃಷ್ಟತೆ ಕುಂಠಿತ


ಹೊಸ ದಿಗಂತ


ವಿಜಯನಗರ ವಾಣಿ

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ: ಸುರೇಂದ್ರ ಕುಮಾರ್


ಕನ್ನಡಪ್ರಭ

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ: ಸುರೇಂದ್ರಕುಮಾರ

ಎರಡು ದಿನಗಳ ಸಂಶೋಧನಾ ವಿಧಾನಗಳು ಕುರಿತಾದ ರಾಷ್ಟ್ರೀಯ ಕಾರ್ಯಾಗಾರ


3


ಎರಡು ದಿನಗಳ ಉಪನ್ಯಾಸ ಸರಣಿ ಕಾರ್ಯಕ್ರಮ


ಬೆಳಗಾಯಿತು

ಶೈಕ್ಷಣಿಕ ಸಂಶೋಧನೆಯಲ್ಲಿ ಭಾರತ ಅಗ್ರಮಾನ್ಯ


ದೇಶದ ಸಂಶೋಧನಾ ಉತ್ಕೃಷ್ಟತೆ ಕುಂಠಿತ


పరిశోధనల్లో నాణ్యత తీసికట్టు

# CMDR'S Media Coverage

## Special Lecture on Comprehensive Plan and Development

## Date : 16th December, 2025

ಕನ್ನಡಪ್ರಭ

### ವಿದ್ಯಾರ್ಥಿಗಳಿಗೆ ಕೌಶಲ್ಯ ಅಗತ್ಯದ ಬಗ್ಗೆ ಅರಿವು ಮೂಡಿಸಿ

#### ಸಮಗ್ರ ಅಭಿವೃದ್ಧಿ ಯೋಜನೆ ಸಿದ್ಧತೆ ಕಾರ್ಯಕ್ರಮದಲ್ಲಿ ಡಾ. ಉದಯ ಶಂಕರ್ ಪುರಾಣಿಕ್

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಪ್ರಸ್ತುತ ಸಂದರ್ಭದಲ್ಲಿ ಉದ್ಯೋಗ ಅವಕಾಶಕ್ಕೆ ಕೌಶಲ್ಯ ಅತಿ ಅವಶ್ಯಕವಾಗಿದ್ದು, ಈ ಬಗ್ಗೆ ವಿದ್ಯಾರ್ಥಿಗಳಿಗೆ ಹೆಚ್ಚು ಮನವರಿಕೆ ಮಾಡಿಕೊಡಬೇಕಿದೆ ಎಂದು ಅಂತಾರಾಷ್ಟ್ರೀಯ ಸೈಬರ್‌ಭದ್ರತೆ ಹಾಗೂ ಎ.ಐ. ತಂತ್ರಜ್ಞಾನದ ಪರಿಣತರು ಮತ್ತು ವಿಜ್ಞಾನ ಲೇಖಕರಾದ ಡಾ. ಉದಯ ಶಂಕರ್‌ಪುರಾಣಿಕ್ ಅವರು ತಿಳಿಸಿದರು.

ನಗರದ ಹೊರವಲಯದಲ್ಲಿರುವ ಚಾಮರಾಜನಗರ ವಿಶ್ವವಿದ್ಯಾನಿಲಯದ ಸುವರ್ಣ ಗಂಗೋತ್ರಿಯ ಕಾನ್ಫರೆನ್ಸ್ ಸಭಾಂಗಣದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯ, ಧಾರವಾಡದ ಸೆಂಟರ್‌ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲೆಪ್ ಮೆಂಟ್ ರಿಸರ್ಚ್ (ಸಿ.ಎಂ.ಡಿ.ಆರ್) ವತಿಯಿಂದ ಆಯೋಜಿಸಲಾಗಿದ್ದ ಸಮಗ್ರ ಅಭಿವೃದ್ಧಿ ಯೋಜನೆಯ ಸಿದ್ಧತೆ ಕುರಿತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜುಗಳಲ್ಲಿ ಕಲಿಯುವ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಉದ್ಯೋಗ ಲಭಿಸಲು ಅಥವಾ ಸ್ವಯಂ ಉದ್ಯೋಗ ಕೈಗೊಳ್ಳಲು ಕೌಶಲ ಅಗತ್ಯವಿದೆ ಎಂಬ ಬಗ್ಗೆ ವಿಶ್ವಾಸ ಮೂಡಿಸಬೇಕು. ಕಾಲೇಜು ಹಂತದಲ್ಲಿ ಕೌಶಲ್ಯ ಮತ್ತು ವೃತ್ತಿ ತರಬೇತಿಯಂತಹ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಸದ್ಬಳಕೆಯಾಗಬೇಕು. ವಿದ್ಯಾರ್ಥಿಗಳ ಮುಂದಿನ ಉದ್ಯೋಗ ಬದುಕಿಗೆ ನೆರವಾಗುವಂತಿರಬೇಕು ಎಂದು ಅವರು ಸಲಹೆ ಮಾಡಿದರು.

ನವೋದ್ಯಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ.



ಚಾಮರಾಜನಗರ ಜಿಲ್ಲೆಯಲ್ಲಿ ನವೋದ್ಯಮಗಳ ಸಂಖ್ಯೆ ಕಡಿಮೆಯಿದೆ. ಕೃಷಿಗೆ ಪ್ರಾಧಾನ್ಯತೆ ಇರುವ ಈ ಜಿಲ್ಲೆಯಲ್ಲಿ ಕೃಷಿ ಆಧಾರಿತ ಸ್ಟಾರ್ಟಪ್‌ಗಳು ಹೆಚ್ಚಾಗಬೇಕಿದೆ. ಆಹಾರ ಸಂಸ್ಕರಣೆ ಇನ್ನಿತರ ಉತ್ಪಾದಕ ಉದ್ಯಮಗಳು ಬರಬೇಕಿದೆ. ಇದರಿಂದ ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

ಕೆಲವರುಕೃತಕಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದಿಂದ ನಿರುದ್ಯೋಗ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂಬ ಆತಂಕ ವ್ಯಕ್ತಪಡಿಸುತ್ತಾರೆ. ತಂತ್ರಜ್ಞಾನವನ್ನು ಪೂರಕವಾಗಿ ಬಳಸಿಕೊಳ್ಳಬೇಕು.

ಸಂಸ್ಥೆಗಳು ಡಾಟಾ ಎಂಟ್ರಿ ಆಪರೇಟರ್‌ಹುದ್ದೆಗಳಿಗೆ ತರಬೇತಿ ನೀಡುವ ಬದಲಾಗಿ ಡ್ರೋನ್ ಮೇಂಟೆನೆನ್ಸ್ ಹಾಗೂ ಆಪರೇಟಿಂಗ್‌ಗಳ ಬಗ್ಗೆ ತರಬೇತಿ ನೀಡಬೇಕು. ಯಾವುದೇ ಹೊಸ ವಿಷಯಗಳು ಆವಿಷ್ಕಾರವಾದರೆ ತಂತ್ರಜ್ಞಾನ ಕ್ಷೇತ್ರಕ್ಕೆ ಕೊಡುಗೆಯಾಗುತ್ತದೆ ಎಂದು ಉದಯ ಶಂಕರ್‌ಪುರಾಣಿಕ್ ಅವರು ತಿಳಿಸಿದರು.

ಹಾವೇರಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಸುರೇಶ್ ಎಚ್ ಜಂಗಮಶೆಟ್ಟಿ ಅವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಕ್ರಿಯೆ ಆರಂಭವಾಗುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿ ಕೊಡುಗೆ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಮುಂದಿನ ಪೀಳಿಗೆಯ ಭವಿಷ್ಯ ಸುಗಮವಾಗಬೇಕು. ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದ್ದು, ತರಗತಿಗಳಲ್ಲಿ ಬೋಧಿಸುವ ವಿಷಯದೊಂದಿಗೆ ಜೀವನದ ಮೌಲ್ಯಗಳ ಕುರಿತು ಅರಿವು ಮೂಡಿಸಬೇಕು ಎಂದರು.

ಧಾರವಾಡದಲ್ಲಿರುವ ಸಿ.ಎಮ್.ಡಿ.ಆರ್‌ನ ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ಅವರು ಮಾತನಾಡಿ ಯಾವುದೇಒಂದುಕ್ಷೇತ್ರದಲ್ಲಿಅಭಿವೃದ್ಧಿಯಾಗಬೇಕಾದರೆ ಹಿಂದಿನ ವರ್ಷದ ಇತಿಹಾಸ ಅನುಭವದ ಬಗ್ಗೆ ಅರಿವಿರಬೇಕು.

ದೇಶದಲ್ಲಿ 28 ಸಿ.ಎಮ್.ಡಿ.ಆರ್‌ಸಂಸ್ಥೆಗಳಿದ್ದು ಕರ್ನಾಟಕ ರಾಜ್ಯದಲ್ಲಿ ಧಾರವಾಡ ಹಾಗೂ ಬೆಂಗಳೂರಿನಲ್ಲಿ ಪ್ರಾದೇಶಿಕ ಕಚೇರಿಗಳನ್ನು ಹೊಂದಿದೆ. ಸಿ.ಎಮ್.ಡಿ.ಆರ್‌ಸಂಸ್ಥೆಗಳು ಜನರ ಸಮಸ್ಯೆಗಳನ್ನು ತಿಳಿಯಲು ತಳಮಟ್ಟದಲ್ಲಿ ವರದಿ ತಯಾರಿಸಿ ಪ್ರಾಥಮಿಕ ಮಾಹಿತಿಯನ್ನು ಪಡೆದ ನಂತರ ಅಭಿವೃದ್ಧಿ ಯೋಜನೆ ತಯಾರಿಕೆಗೆ ಸಿದ್ಧತೆ ಮಾಡಲಿದೆ ಎಂದು ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್‌ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಸಿಎಮ್‌ಡಿಆರ್ ಸಂಸ್ಥೆಯ ಸಂಯೋಜಕರಾದ ಡಾ.ಜ್ಯೆ ಪ್ರಭಾಕರ್ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

CHAMARAJANAGAR Edition
Dec 16, 2025 Page No. 01
Powered by: erelego.com

ಶೋಷಿತರ ಧ್ವನಿ — 14–12–2025

### ವಿದ್ಯಾರ್ಥಿಗಳು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು: ಪ್ರೊ, ಎಂಆರ್ ಗಂಗಾಧರ್



ಚಾಮರಾಜನಗರ: ವಿದ್ಯಾರ್ಥಿಗಳು ಸಂಶೋಧನೆಗೆ ಹೆಚ್ಚಿನ ಅದ್ಯತೆ ನೀಡಬೇಕು ಎಂದು ಚಾಮರಾಜನಗರ ವಿಶ್ವವಿದ್ಯಾಲಯ ಕುಲಪತಿ ಪ್ರೊ ಎಂ ಆರ್ ಗಂಗಾಧರ್ ತಿಳಿಸಿದರು.

ನಂಜನಗೂಡು ರಸ್ತೆಯಲ್ಲಿರುವ ಚಾಮರಾಜನಗರ ವಿಶ್ವವಿದ್ಯಾಲಯ ಹಾಗೂ ಧಾರವಾಡ ಬಹುಶಾಸ್ತ್ರೀಯ ವಿಕಾಸ ಸಂಶೋಧನೆ ಕೇಂದ್ರ, ಮತ್ತು ಕೊಡಗು ವಿಶ್ವವಿದ್ಯಾಲಯ ಸಂಯುಕ್ತ ಆಶ್ರಯದಲ್ಲಿ ಜನ ಜಾತಿ ಗೌರವ ದಿವಸ ಭಗವಾನ್ ಶ್ರೀ ಭಗವಾನ್ ಶ್ರೀ ಬಿಸ್ಮಾ ಮುಂಡಾ ರವರ 150ನೇ ಜಯಂತಿ ಗೌರವಾರ್ಥ ಒಂದು ದಿವಸ ವಿಚಾರ ಸಂಕಿರಣ ಕರ್ನಾಟಕ ಬುಡಕಟ್ಟು ಸಮುದಾಯಗಳ ಸಬಲೀಕರಣ ಮತ್ತು ಸಮಕಾಲೀನ ಸವಲುಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ್ದ. ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹಲವು ಹಲವಾರು ಜನಪರ ಯೋಜನೆಗಳನ್ನು ಜಾರಿ ಮಾಡಿದೆ ಇದನ್ನು ಉಪಯೋಗಿಸಿಕೊಂಡು ಮುಖ್ಯ ವಾಹಿನಿಗೆ ಬರಬೇಕು. ವಿಶೇಷವಾಗಿ ಬುಡಕಟ್ಟು ವಿದ್ಯಾರ್ಥಿಗಳು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಅವಾಗ ನಿಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದು ಹೇಳಿದವರು. ಈಗಾಗಲೇ ಬುಡಕಟ್ಟು ಅನೇಕ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಕಾಡಿನಲ್ಲಿ ಉತ್ತಮ ಪರಿಸರದಲ್ಲಿ ಜ್ಞಾನ ಭಂಡಾರ ಹೆಚ್ಚಿಸಲು ಅನುಕೂಲ ಆಗುತ್ತದೆ, ಇದರ ಜೊತೆ ಉತ್ತಮ ಪರಿಸರದಲ್ಲಿ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬಹುದು ಎಂದು ಹೇಳಿದರು

ಪ್ರತಿಯೊಬ್ಬ ವಿದ್ಯಾರ್ಥಿಗಳು ನುರಿತ ಉಪನ್ಯಾಸಕರಿಂದ ಮಾತನಾಡುವಾಗ ಬರೆದಿಕೊಳ್ಳುವ ಅಭಿರುಚಿ ಬೆಳೆಸಿಕೊಳ್ಳಬೇಕು ಇದು ಪರೀಕ್ಷಾ ಸಂದರ್ಭದಲ್ಲಿ ನಿಮಗೆ ಅನುಕೂಲ ಆಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಪ್ರಾಧ್ಯಾಪಕ, ಮುಖ್ಯಸ್ಥರು ನೈಸರ್ಗಿಕ ಸಂಪನ್ಮೂಲ ಅರಣ್ಯ ವಿಭಾಗ ಪ್ರೊ ಎಂ ಜಡೆಯೇ ಗೌಡ ಮಾತನಾಡಿ. ಕಠಿಣ ಶ್ರಮದಿಂದ ಯಶಸ್ಸು ಸಾಧಿಸಿದ್ದ ಹಲವಾರು ವಿದ್ಯಾರ್ಥಿಗಳು ಇಂದಿಗೆ ನಮಗೆ ಸ್ಪೂರ್ತಿಯಾಗಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಗುರು ಹಿರಿಯರಿಗೆ ಹಾಗೂ ಪೋಷಕರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಬೇಕು ಅವಾಗ ಉತ್ತಮ ಅಂಕ ಗಳಿಸುವ ಸಾಧ್ಯತೆಗಳಿವೆ ನಂತರ ಉನ್ನತ ಮಟ್ಟದ ಅಧಿಕಾರಿಗಳಾಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು

ಮೈಸೂರು ಶಾರದಾ ಕಾಲೇಜು ಉಪನ್ಯಾಸಕ ಎಸ್.ಗಿರೀಶ್, ದಾರವಾಡ ಸಿಎಂಡಿಆರ್ ನಿರ್ದೇಶಕ. ಪ್ರೊ ಬಸವಪ್ರಭು ಜರ್ವಿ. ಡಾ.ಎಸ್ ಸಿ ಜ್ಯೆ ಪ್ರಭಾಕರ್ ದಾರವಾಡ ಸಿಎಂಡಿಆರ್ ಸಂಯೋಜಕ. ಹಾಗೂ ಗಾರ ಸುರೇಶ್ ಜಿ. ಮೈಸೂರು ವಿಶ್ವವಿದ್ಯಾಲಯ ಪ್ರೊ,ಸಿದ್ದರಾಜು ಚಾಮರಾಜನಗರ ಬಿಎಡ್ ಕಾಲೇಜಿನ ಪ್ರಾಂಶುಪಾಲ ಪ್ರೊ ಕೆ ಸಿ ಬಸವಣ್ಣ. ಚಾಮರಾಜನಗರ ವಿಶ್ವವಿದ್ಯಾಲಯ ಡಾಕ್ಟರ್ ಮಹದೇವ ಸ್ವಾಮಿ ಗುರುರಾಜ್. ಶಿವರಾಜ್.. ಹಾಜಿರ, ದಿವ್ಯ. ಕಾಮಿಲ. ಚಂದನ. ಭಾಗ್ಯ. ಸುಷ್ಮಾ. ಬಸವಣ್ಣ. ಭಾನುಪ್ರಿಯ. ಸೇರಿದಂತೆ ಕಾಲೇಜಿನ್ ಎಲ್ಲಾ ಉಪನ್ಯಾಸಕರು ವಿಧಿಧ ಕಾಲೇಜಿನ ಮುಖ್ಯಸ್ಥರು ವಿದ್ಯಾರ್ಥಿಗಳು ಹಾಜರಿದ್ದರು

### ಕನ್ನಡ ಭಾಷೆ ಸಿಗಬೇಕಾಗಿರುವ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ: ಜಿಲ್ಲಾಧಿಕಾರಿ

# CMDR'S Media Coverage

## Report of the Workshop on "Recent Developments in Education: Issues and Challenges" Date – 18th December,2025












April-2025 to March-2026

# CMDR'S Media Coverage

## Special Lecture on Research Methods and Technics

## Date :20th December 2025



...ಗಾವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

...ಪ್ರಬಂಧಕರಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

### ಅಗತ್ಯ ಆಧರಿಸಿ ಸಂಶೋಧನೆ ನಡೆಸಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಂಶೋಧನೆಯು ವೈಜ್ಞಾನಿಕತೆ ಮತ್ತು ತಾಂತ್ರಿಕತೆಯನ್ನಷ್ಟೇ ಅವಲಂಬಿಸದೆ, ಮನುಷ್ಯನ ಅಗತ್ಯತೆ ಹಾಗೂ ಸಾಮಾಜಿಕ ಸ್ಥಿತಿಗತಿ ಆಧರಿಸಬೇಕು' ಎಂದು ಧಾರವಾಡದ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಬಸವಪ್ರಭು ಜಿರಲಿ ಹೇಳಿದರು.

ಇಲ್ಲಿನ ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ ಶುಕ್ರವಾರ ನಡೆದ 'ಸಂಶೋಧನಾ ವಿಧಾನ'–ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸಂಶೋಧನಾ ಕ್ಷೇತ್ರವು ವೈಜ್ಞಾನಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದರೂ ಮನುಷ್ಯನ ಸಾಮಾಜಿಕ ನಡವಳಿಕೆ ಮೇಲೆ ಅದರ ಪರಿಣಾಮ ಮತ್ತು ಫಲಿತಾಂಶ ಆಧಾರಿತವಾಗಿರುತ್ತದೆ. ಜ್ಞಾನ, ಕಠಿಣ ಪರಿಶ್ರಮದಿಂದ ಸಂಶೋಧನೆಯಲ್ಲಿ ತೊಡಗಬೇಕು' ಎಂದರು.

'ಸಂಶೋಧನೆಯು ದೇಶದ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ದೈನಂದಿನ ಜೀವನ ಸಾಗಿಸಲು ಅವಶ್ಯವಾಗಿದೆ. ಕಾನೂನು ಕ್ಷೇತ್ರದ ಸಂಶೋಧನೆಯು ಮನುಷ್ಯನ ವರ್ತನೆ ಹಾಗೂ ಸ್ಥಿತಿಗತಿ ಅವಲಂಬಿಸಿದೆ. ಇದು ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನದಲ್ಲಿ ನಡೆಯುತ್ತದೆ' ಎಂದು ವಿವರಿಸಿದರು.

ಕೊಚ್ಚಿನ್ ಎನ್.ಯು.ಎ.ಎಲ್.ಎಸ್. ಮಾಜಿ ಕುಲಪತಿ ಸನ್ನಿ, ತುಮಕೂರು ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಸತೀಶಗೌಡ ಎನ್., ಮೌಲ್ಯಮಾಪನ ಕುಲಸಚಿವೆ ರತ್ನಾ ಆರ್.ಭರಮಗೌಡರ್, ಕಾರ್ಯಾಗಾರದ ಸಂಯೋಜಕ ಕೆ.ಸಿ. ಗಿರೀಶ, ಸುನೀಲ ಬಾಗಡೆ, ಅರ್ಚನಾ ಕೆ., ಮನೀಷಾ ಎಂ. ಇದ್ದರು.

ವಿಶ್ವವಿದ್ಯಾಲಯ ಸಂಯೋಜಿತ 110ಕ್ಕೂ ಹೆಚ್ಚು ಕಾನೂನು ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ಸಂಶೋಧನಾ ವಿದ್ಯಾರ್ಥಿಗಳು, ವಕೀಲರು ಹಾಜರಿದ್ದರು.

ಹುಬ್ಬಳ್ಳಿಯ ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು

#### 'ಪ್ರಗತಿಗೆ ಸಂಶೋಧನೆ ಅಡಿಪಾಯ'

'ಸಂಶೋಧನೆಯು ನಿರಂತರವಾಗಿ ಹರಿಯುವ ನೀರಿನಂತೆ. ಅದಕ್ಕೆ ಕೊನೆ ಎಂಬುದಿಲ್ಲ. ಸಂಶೋಧನಾ ಕ್ಷೇತ್ರದಲ್ಲಿ ಹೊಸ ಆವಿಷ್ಕಾರದ ಅವಶ್ಯಕತೆ ಇದೆ. ಸಂಶೋಧನೆಯು ಶಿಕ್ಷಣ ಸಂಸ್ಥೆಗಳ ವ್ಯವಸ್ಥೆ, ಪ್ರಗತಿಗೆ ಅಡಿಪಾಯವಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಸಿ.ಬಸವರಾಜು ತಿಳಿಸಿದರು.

'ಸಂಶೋಧಕರು ವೈಜ್ಞಾನಿಕವಾಗಿ ಸಂಶೋಧನೆ ನಡೆಸಬೇಕು. ವಾಸ್ತವದೊಂದಿಗೆ ಭವಿಷ್ಯದ ಪರಿಣಾಮಗಳನ್ನು ಕೂಲಂಕಶವಾಗಿ ಸಂಶೋಧಿಸಬೇಕು. ಕಾನೂನು ಕ್ಷೇತ್ರದಲ್ಲಿ ಪದವಿ ಪಡೆಯಲು ಮಾತ್ರ ಸಂಶೋಧನೆ ನಡೆಸದೆ, ಜೀವನ, ಸಾಮಾಜಿಕ ಮತ್ತು ಕ್ಷೇತ್ರದ ಬೆಳವಣಿಗೆಯ ದೃಷ್ಟಿಕೋನ ಇಟ್ಟುಕೊಳ್ಳಬೇಕು' ಎಂದು ಹೇಳಿದರು.



...ವಾಡ ಶನಿವಾರ,20 ಡಿಸೆಂಬರ್ 2025, ಹುಬ್ಬಳ್ಳಿ x.com/vijaykarnataka facebook.com/vijaykarnata...

### ದೇಶದ ಅಭಿವೃದ್ಧಿಗೆ ಸಂಶೋಧನೆ ಸಹಕಾರಿ

#### ಕಾನೂನು ವಿವಿಯಲ್ಲಿ 2 ದಿನಗಳ ಸಂಶೋಧನಾ ವಿಧಾನ ಕಾರ್ಯಾಗಾರಕ್ಕೆ ಚಾಲನೆ

ವಿಕ ಸುದ್ದಿಲೋಕ ಹುಬ್ಬಳ್ಳಿ

ಪ್ರತಿಯೊಂದು ಸಂಶೋಧನೆಯೂ ದೇಶದ ಅಭಿವೃದ್ಧಿಗೆ ಸಹಾಯಕವಾಗಿದ್ದು, ಮಾನವನ ದಿನನಿತ್ಯ ಜೀವನದಲ್ಲಿ ಸಂಶೋಧನೆ ಪಾತ್ರ ತುಂಬಾ ದೊಡ್ಡದಿದೆ ಎಂದು ಧಾರವಾಡದ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಬಸವಪ್ರಭು ಜಿರಲಿ ಹೇಳಿದರು.

ನವನಗರದಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿವಿಯ ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ ವಿವಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಂಶೋಧನಾ ವಿಧಾನ ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಶೋಧನೆಯಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಎಂಬ ಎರಡು ವಿಧಾನಗಳಿವೆ. ಸಂಶೋಧಕನು ಸಂಶೋಧನೆಯಲ್ಲಿ ತೀಕ್ಷ್ಣ ವೀಕ್ಷಣೆಯ, ಜ್ಞಾನ ಮತ್ತು ಕಠಿಣ ಪರಿಶ್ರಮದಿಂದ ತೊಡಗುವುದು ಅವಶ್ಯ. ಕಾನೂನು ಸಂಶೋಧನೆ ಎಂದರೆ ಸಾಮಾಜಿಕ ಸಂಶೋಧನೆಯಾಗಿದೆ. ಇಂತಹ ಸಂಶೋಧನೆ ಮನುಷ್ಯನ ನಡವಳಿಕೆ ಮತ್ತು ಸ್ಥಿತಿಗತಿಗಳ ಮೇಲೆ ಅವಲಂಬಿತರಾಗಿರುತ್ತವೆ. ವೈಜ್ಞಾನಿಕವಾಗಿ ಎಷ್ಟೇ ಸಂಶೋಧನೆಗಳು ನಡೆದರೂ ಅವುಗಳ ಪರಿಣಾಮ, ಫಲಿತಾಂಶವು ಮನುಷ್ಯನ ಸಾಂಸ್ಕೃತಿಕ ನಡವಳಿಕೆ ಮೇಲೆ ನಿಂತಿರುತ್ತದೆ ಎಂದು ತಿಳಿಸಿದರು.

ಕಾನೂನು ವಿವಿ ಕುಲಪತಿ ಡಾ.ಸಿ.ಬಸವರಾಜು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಶೋಧನೆ ಎಂಬುದು ನಿರಂತರ ಹರಿಯುತ್ತಿರುವ ನೀರು. ಇದಕ್ಕೆ ಕೊನೆಯೆಂಬುದೇ ಇಲ್ಲ. ಸಂಶೋಧನೆಗೆ ಸಂಬಂಧಿಸಿದಂತೆ ಆವಿಷ್ಕಾರಗಳನ್ನು ಕೈಗೊಳ್ಳುವ ಅವಶ್ಯಕತೆ ಇಂದು ಸಮಾಜಕ್ಕೆ ಬಹುಮುಖ್ಯವಾಗಿದೆ ಎಂದರು.

ಕಾನೂನು ಕ್ಷೇತ್ರದಲ್ಲಿ ಸಂಶೋಧನೆ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೇವಲ ಪದವಿ ಪಡೆಯಲಿಕ್ಕೆ ಸೀಮಿತವಾಗದೆ, ನಿಜ ಜೀವನದ, ಸಾಮಾಜಿಕ ಮತ್ತು ಕಾನೂನು ಕ್ಷೇತ್ರದ ಬೆಳವಣಿಗೆಯ ದೃಷ್ಟಿಯನ್ನಿಟ್ಟುಕೊಂಡು ಸಂಶೋಧನೆಗಳನ್ನು ಕೈಗೊಳ್ಳಬೇಕು ಎಂದು ಸಲಹೆ ಮಾಡಿದರು.

ಕಾರ್ಯಾಗಾರದಲ್ಲಿ ಕೊಚ್ಚಿನ್ ಎನ್‌ಯುಎಎಲ್‌ಎಸ್ ಮಾಜಿ ಕುಲಪತಿ ಪ್ರೊ.ಸನ್ನಿ, ತುಮಕೂರು ವಿವಿ ಮಾಜಿ ಕುಲಸಚಿವ ಡಾ.ಸತೀಶಗೌಡ ಎನ್., ಮೌಲ್ಯಮಾಪನ ಕುಲಸಚಿವೆ ಡಾ.ರತ್ನಾ ಆರ್.ಭರಮಗೌಡರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಯೋಜಕರಾದ ಡಾ.ಕೆ.ಸಿ.ಗಿರೀಶ, ಡಾ.ಸುನೀಲ ಬಾಗಡೆ, ಡಾ.ಅರ್ಚನಾ ಕೆ. ಮತ್ತು ಮನೀಷಾ ಎಂ.ಭಾಗವಹಿಸಿದ್ದರು.

110ಕ್ಕೂ ಹೆಚ್ಚು ಸಂಯೋಜಿತ ಕಾನೂನು ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ಸಂಶೋಧನಾ ವಿದ್ಯಾರ್ಥಿಗಳು, ಹುಬ್ಬಳ್ಳಿ ಧಾರವಾಡದ ಹಿರಿಯ ವಕೀಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇದ್ದರು. ವಿದ್ಯಾರ್ಥಿನಿ ಧನ್ಯಾ ಹೆಗಡೆ ಪ್ರಾರ್ಥಿಸಿದರು. ಸಿಂಚನ ಸ್ವಾಗತಿಸಿದರು. ಸ್ಫೂರ್ತಿ ಹೊಸಕೇರಿ ನಿರೂಪಿಸಿದರು. ಸಂಜನಾ ವಂದಿಸಿದರು.

ಹುಬ್ಬಳ್ಳಿ ನವನಗರದಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿವಿಯ ಆಂತರಿಕ ಗುಣಮಟ್ಟ ಭರವಶೆ ಕೋಶದ ವತಿಯಿಂದ ವಿವಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರವನ್ನು ಧಾರವಾಡದ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಬಸವಪ್ರಭು ಜಿರಲೆ ಉದ್ಘಾಟಿಸಿದರು.

# CMDR'S Media Coverage

## Special Lecture on Indian Knowledge Systems and Indian Languages – Date -15th March, 2026

### ವಿಶೇಷ ಉಪನ್ಯಾಸ ಇಂದು

**ಹುಕ್ಕೇರಿ:** ತಾಲೂಕಿನ ಬೆಲ್ಲದ ಬಾಗೇವಾಡಿಯ ವಿ.ಎಂ.ಕತ್ತಿ ಪ್ರಥಮ ದರ್ಜೆ ವಿಜ್ಞಾನ ಮಹಾವಿದ್ಯಾಲಯ ಮತ್ತು ಧಾರವಾಡ ಬಹು ಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ಮಾ.13ರಂದು ಮಧ್ಯಾಹ್ನ 12 ಗಂಟೆಗೆ 'ಭಾರತೀಯ ಜ್ಞಾನ ಪರಂಪರೆಯ ವಾಹಕವಾಗಿ ಭಾರತೀಯ ಭಾಷೆಗಳು' ವಿಷಯ ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಹಾರೂಗೇರಿಯ ನಿವೃತ್ತ ಪ್ರಾಧ್ಯಾಪಕ ಡಾ.ವಿ.ಎಸ್.ಮಾಳಿ, ಧಾರವಾಡ ಸಂಶೋಧನಾ ಸಹಾಯಕ ಡಾ.ಪ್ರತೀಕ ಮಾಳಿ, ಪ್ರಾಂಶುಪಾಲ ಡಾ.ವಿ.ಎಸ್.ಹೂಗಾರ, ಆಡಳಿತಾಧಿಕಾರಿ ಕೆ.ಸಿ.ಮುಚಖಂಡಿ ಭಾಗಿಯಾಗಲಿದ್ದಾರೆ ಎಂದು ಮಹಾವಿದ್ಯಾಲಯದ ಮಾರ್ಗದರ್ಶಕ ಪವನ ಕತ್ತಿ ತಿಳಿಸಿದರು.



ಪವನ ಕತ್ತಿ

ವಿಜಯ ಕರ್ನಾಟಕ e-paper

### 'ದೇಶಿ ಭಾಷೆಗಳಲ್ಲಿದೆ ಸಂಸ್ಕೃತಿ, ಬೌದ್ಧಿಕ ಶ್ರೀಮಂತಿಕೆ'



ಬೆಲ್ಲದ ಬಾಗೇವಾಡಿಯ ವಿ.ಎಂ. ಕತ್ತಿ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ವಿ.ಎಸ್. ಮಾಳಿ ಮಾತನಾಡಿದರು.

**ಹುಕ್ಕೇರಿ:** ನಮ್ಮ ಪೂರ್ವಜರು ಗಳಿಸಿದ್ದ ಅಗಾಧ ಜ್ಞಾನ ಮತ್ತು ಸಂಸ್ಕೃತಿಯನ್ನು ಭಾವಿ ಪೀಳಿಗೆಗೆ ದಾಟಿಸುವಲ್ಲಿ ದೇಶಿ ಭಾಷೆಗಳ ಪಾತ್ರ ಅನನ್ಯವಾಗಿದೆ ಎಂದು ಸಾಹಿತಿ ಡಾ. ವಿ.ಎಸ್. ಮಾಳಿ ಅಭಿಪ್ರಾಯಪಟ್ಟರು.

ಅವರು, ಸ್ಥಳೀಯ ವಿಶ್ವನಾಥ ಕತ್ತಿ ಪ್ರಥಮ ದರ್ಜೆ ಕಾಲೇಜು ಹಾಗೂ ಧಾರವಾಡದ ಬಹು ಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಜಂಟಿ ಸಹಯೋಗದಲ್ಲಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ''ಭಾರತದ ಸಂಸ್ಕೃತಿ ಮತ್ತು ಬೌದ್ಧಿಕ ಶ್ರೀಮಂತಿಕೆ ನಮ್ಮ ಭಾಷೆಗಳಲ್ಲಿ ಅಡಗಿದೆ. ಈ ಭಾಷೆಗಳ ಉಳಿವಿನಿಂದ ಮಾತ್ರ ನಮ್ಮ ಮೂಲ ಸತ್ವ ಉಳಿಸಿಕೊಳ್ಳಲು ಸಾಧ್ಯ,'' ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ವಿ.ಎಸ್. ಹೂಗಾರ ಮಾತನಾಡಿ, ''ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಂಥ ವೈಚಾರಿಕ ಕಾರ್ಯಕ್ರಮಗಳ ಅಗತ್ಯತೆ ಹೆಚ್ಚಿದೆ,'' ಎಂದರು. ಸಿಎಂಡಿಆರ್ ಅಧಿಕಾರಿ ಡಾ. ಪ್ರತೀಕ್ ಮಾಳಿ ಪ್ರಾಸ್ತಾವಿಕ ಮಾತನಾಡಿದರು. ಕೆ.ಸಿ. ಮುಚಖಂಡಿ, ಐ.ಎಸ್. ಹುದ್ದಾರ, ಡಾ. ಯು.ಕೆ. ಪಾಟೀಲ ಹಾಗೂ ವಿದ್ಯಾರ್ಥಿಗಳು ಇದ್ದರು. ಸೌಮ್ಯಾ ಗುಡಸಿ ನಿರೂಪಿಸಿದರ. ಪಲ್ಲವಿ ವಂದಿಸಿದರು.

Main Edition
Mar 15, 2026 Page No. 4

ಳಗಾವಿ

ನ್ಸೂಚನೆ: ಜಿಲ್ಲೆಯಲ್ಲಿ ಬಿಸಿಲಿನ ವಾತಾವ

### ಅಲ್ಲಲ್ಲಿ ಏನೇನು?

**ಬೆಲ್ಲದ ಬಾಗೇವಾಡಿ (ಹುಕ್ಕೇರಿ)**

**ವಿಶೇಷ ಉಪನ್ಯಾಸ:** ಭಾರತೀಯ ಜ್ಞಾನ ಪರಂಪರೆಯ ವಾಹಕವಾಗಿ ಭಾರತೀಯ ಭಾಷೆಗಳು ಕುರಿತು, ಅಧ್ಯಕ್ಷತೆ- ಪವನ್ ಕತ್ತಿ, ಸಂಪನ್ಮೂಲ ವ್ಯಕ್ತಿ: ವಿ.ಎಸ್. ಮಾಳಿ, ಮುಖ್ಯ ಅತಿಥಿ- ಧಾರವಾಡ ಸಿಎಂಡಿಆರ್ ಸಂಶೋಧನಾ ಸಹಾಯಕ ಡಾ.ಪ್ರತೀಕ ಮಾಳಿ, ಉಪಸ್ಥಿತಿ- ಪ್ರಾಚಾರ್ಯ ವಿ.ಎಸ್.ಹೂಗಾರ್, ಎಒ ಕೆ.ಸಿ.ಮುಚಖಂಡಿ, ಸ್ಥಳ-ಕಾಲೇಜಿನ ಸಭಾ ಭವನ, ಮಧ್ಯಾಹ್ನ 12ಕ್ಕೆ

April-2025 to March-2026

# CMDR'S Media Coverage

## Special Lecture on Indian Knowledge System

## Date : 23rd March, 2026

## ಕಲ್ಲಡ್ಕ: ಭಾರತೀಯ ಜ್ಞಾನ ಪರಂಪರೆಯ ಘಟಕ ಉದ್ಘಾಟನೆ

■ **ವಿಕ ಸುದ್ದಿಲೋಕ** ಬಂಟ್ವಾಳ

ಧಾರವಾಡದ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ, ಕಲ್ಲಡ್ಕದ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ ಕರ್ನಾಟಕ ಹಾಘೂ ಐಕ್ಯೂಎಸಿ ಸಹಯೋಗದೊಂದಿಗೆ ಭಾರತೀಯ ಜ್ಞಾನ ಪರಂಪರೆ ಐಕೆಎಸ್ ಘಟಕದ ಉದ್ಘಾಟನಾ ಕಾರ್ಯಕ್ರಮ ಕಲ್ಲಡ್ಕದ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ನಡೆಯಿತು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ದೀಪ ಬೆಳಗಿಸಿ ಉದ್ಘಾಟಿಸಿ, ಭಾರತದ ಜ್ಞಾನ ಪರಂಪರೆಯ ವಿಚಾರಗಳನ್ನು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳುವುದು ಬಹಳ ಅಗತ್ಯ. ಇಂತಹ ಜ್ಞಾನ ಪರಂಪರೆ ನಮ್ಮ ಹೆಮ್ಮೆ. ಆಧುನಿಕ ವಿದ್ಯಾಭ್ಯಾಸಕ್ಕೆ ಒಗ್ಗಿ ಹೋಗಿದ್ದರೂ ಪ್ರತಿಯೊಬ್ಬನೂ ಭಾರತದ ಜ್ಞಾನ ಪರಂಪರೆಯ ಕಡೆಗೆ ತಿರುಗಿ ನೋಡಬೇಕಾದ ಅನಿವಾರ್ಯ ಇದೆ ಎಂದರು.

ಸಂಶೋಧನಾ ಸಹಾಯಕ ಪ್ರತೀಕ್ ಮಾಳಿ ಭಾರತೀಯ ಜ್ಞಾನ ಪರಂಪರೆಯ ಮಹತ್ವ ತಿಳಿಸಿ ಶುಭಹಾರೈಸಿದರು. ಉಡುಪಿಯ ಆಸೆಮ್ಸ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಡಾ. ಪವನ್ ಕಿರಣಕೆರೆ, ಭಾರತೀಯ • ಜ್ಞಾನಪರಂಪರೆ ಪ್ರಾಚೀನತೆಯಿಂದ ಆಧುನಿಕತೆಯೆಡೆಗೆ ಕುರಿತು ಉಪನ್ಯಾಸ ನೀಡಿದರು. ಸಿಎಂಡಿಆರ್ ಸಂಶೋಧನಾ ಸಹಾಯಕ ಪ್ರತೀಕ್ ಮಾಳಿ, ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಸುಕನ್ಯಾ, ಘಟಕದ ಸಂಯೋಜಕ ಧನಂಜಯ ಉಪಸ್ಥಿತರಿದ್ದರು.

ಐಕೆಎಸ್ ಪರೀಕ್ಷೆಯಲ್ಲಿ ಕಾಲೇಜಿನಲ್ಲಿ ಅಗ್ರಶ್ರೇಣಿ ಪಡೆದ ಬಿಕಾಂ ವಿದ್ಯಾರ್ಥಿ ಲವನೀಶ್ ಅವರನ್ನು ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು. ಪ್ರಿನ್ಸಿಪಾಲ್ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಪ್ರಾಸ್ತಾವಿಕ ಮಾತನಾಡಿದರು. ಬಿಸಿಎ ವಿದ್ಯಾರ್ಥಿ ಜಯಸೂರ್ಯ ಕಾರ್ಯಕ್ರಮ ನಿರೂಪಿಸಿದರು.



ಭಾರತೀಯ ಜ್ಞಾನಪರಂಪರೆ (ಐಕೆಎಸ್) ಘಟಕ ಉದ್ಘಾಟನೆ ನಡೆಯಿತು.

## ಕಲ್ಲಡ್ಕ ಮಹಾವಿದ್ಯಾಲಯ: ಭಾರತೀಯ ಜ್ಞಾನ ಪರಂಪರೆಯ ಘಟಕ ಉದ್ಘಾಟನೆ




**ಬಂಟ್ವಾಳ:** ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಧಾರವಾಡ, ಶ್ರೀ ರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಹಾಗೂ ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ, ಕರ್ನಾಟಕ ಇವುಗಳ ಸಹಯೋಗದೊಂದಿಗೆ ಭಾರತೀಯ ಜ್ಞಾನ ಪರಂಪರೆಯ ಘಟಕದ ಉದ್ಘಾಟನಾ ಕಾರ್ಯಕ್ರಮ ಕಲ್ಲಡ್ಕ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಶ್ರೀರಾಮ ಪದವಿ ವಿಭಾಗದ ಘಟಕ ಉದ್ಘಾಟಿಸಿ, ಭಾರತದ ಜ್ಞಾನ ಪರಂಪರೆಯ ವಿಚಾರಗಳನ್ನು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳುವುದು ಇಂದಿನ ಅಗತ್ಯವಿದೆ. ಇಂತಹ ಜ್ಞಾನ ಪರಂಪರೆ ನಮ್ಮ ಹೆಮ್ಮೆಯಾಗಿದೆ ಎಂದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಸಹಾಯಕ ಪ್ರತೀಕ್ ಮಾಳಿ ಭಾರತೀಯ ಜ್ಞಾನ ಪರಂಪರೆಯ ಮಹತ್ವವನ್ನು ತಿಳಿಸಿದರು.

ಬಳಿಕ ಉಡುಪಿಯ ಆಸೆಮ್ಸ್ ಕಾಲೇಜಿನ ಪ್ರಾಂಶುಪಾಲರು, ಪ್ರಖ್ಯಾತ ಯಕ್ಷಗಾನ ಕಲಾವಿದರು, ಪ್ರಸಂಗಕರ್ತರಾದ ಪ್ರೊ. ಡಾ. ಪವನ್ ಕಿರಣಕೆರೆ ಅವರು 'ಭಾರತೀಯ ಜ್ಞಾನಪರಂಪರೆ– ಪ್ರಾಚೀನತೆಯಿಂದ ಆಧುನಿಕತೆಯೆಡೆಗೆ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು.

ಕಾಲೇಜಿನ ಉಪಪ್ರಾಂಶುಪಾಲ ಸುಕನ್ಯಾ, ಘಟಕದ ಸಂಯೋಜಕ ಧನಂಜಯ ಉಪಸ್ಥಿತರಿದ್ದರು. ಇತ್ತೀಚೆಗೆ ನಡೆದ ಐಎಎಸ್ ಸಂಬಂಧಿತ ಪರೀಕ್ಷೆಯಲ್ಲಿ ಕಾಲೇಜಿನಲ್ಲಿ ಅಗ್ರಶ್ರೇಣಿ ಪಡೆದ ಬಿಕಾಂ ವಿದ್ಯಾರ್ಥಿ ಲವನೀಶ್ ಅವರನ್ನು ಅಭಿನಂದಿಸಲಾಯಿತು. ಪ್ರಾಂಶುಪಾಲ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಸ್ವಾಗತಿಸಿ, ಪ್ರಸ್ತಾವನೆಗೈದರು. ವಿದ್ಯಾರ್ಥಿ ಜಯಸೂರ್ಯ ನಿರೂಪಿಸಿದರು. ಘಟಕದ ಸಂಯೋಜಕ ಧನಂಜಯ ವಂದಿಸಿದರು.

April-2025 to March-2026

# CMDR'S Media Coverage

## Special Lecture on Indian Knowledge Systems

## Date : 23rd March 2026

# ಪರಂಪರೆ ಭಾರತದ ಸಾಂಸ್ಕೃತಿಕ ಹೆಗ್ಗುರುತು



ಕಾಗವಾಡ ಶಿವಾನಂದ ಮಹಾವಿದ್ಯಾಲಯದಲ್ಲಿ 'ಭಾಷಾಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆ' ಕುರಿತು ಏರ್ಪಡಿಸಿದ್ದ ಕಾರ್ಯಕ್ರಮವನ್ನು ಗಜಾನನ ಮನ್ನಿಕೇರಿ ಉದ್ಘಾಟಿಸಿದರು.

**ಮೋಳೆ:** ಭಾರತೀಯ ಭಾಷಾ ಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆ ಆರ್ಥಿಕ ಸಮೃದ್ಧಿಯೊಂದಿಗೆ ಆತ್ಮಗೌರವ, ಸ್ವರಾಜ್ಯ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯದ ಮೂಲ ಮಂತ್ರವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಮನ್ನಿಕೇರಿ ಅಭಿಪ್ರಾಯಪಟ್ಟರು.

ಕಾಗವಾಡ ಪಟ್ಟಣದ ಶಿವಾನಂದ ಮಹಾವಿದ್ಯಾಲಯದಲ್ಲಿ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಧಾರವಾಡ ಮತ್ತು ಶಿವಾನಂದ ಮಹಾವಿದ್ಯಾಲಯ ಕಾಗವಾಡ ಇವುಗಳ ಸಂಯುಕ್ತ ಆಶ್ರಯದಲ್ಲಿ ಐಕ್ಯೂಎಸಿ ಪ್ರಾಯೋಜಿತದಲ್ಲಿ ಅರ್ಥಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ 'ಭಾರತೀಯ ಭಾಷಾಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆಯ ಅಡಿಪಾಯಗಳು, ಜ್ಞಾನ ಮತ್ತು ಜೀವನ ಮೌಲ್ಯಗಳನ್ನು ಅನುಲಕ್ಷಿಸಿ' ಎನ್ನುವ ವಿಷಯದ ಕುರಿತು ಏರ್ಪಡಿಸಿದ ರಾಜ್ಯ ಮಟ್ಟದ ವಿಶೇಷ ಉಪನ್ಯಾಸ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಪರಂಪರೆ ಎನ್ನುವುದು ಒಂದು ಸಮಾಜದ ಸಾಂಸ್ಕೃತಿಕ ಹೆಗ್ಗುರುತು. ಆಧುನಿಕ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ನಗರೀಕರಣ ಮತ್ತು ಜಾಗತೀಕರಣವು ಪರಂಪರೆಯ ಮೇಲೆ ಮಹತ್ತರವಾದ ಬದಲಾವಣೆ ತರುತ್ತಿವೆ. ಹೀಗಾಗಿ ಹಿಂದಿನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಅರ್ಥ ಮಾಡಿಸುವ ಅವಶ್ಯಕತೆಯಿದೆ. ಅದಕ್ಕಾಗಿ ನಮ್ಮ ಪೂರ್ವಜರು ಹಾಕಿಕೊಟ್ಟ ದಾರಿಯಲ್ಲಿ ನಾವುಗಳು ಸಾಗಬೇಕು ಎಂದು ಹೇಳಿದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಸಂಶೋಧನಾ ಸಹಾಯಕ ಡಾ.ಪ್ರತೀಕ ಮಾಳಿ ಮಾತನಾಡಿದರು. ಪ್ರಾಚಾರ್ಯ ಡಾ.ಎಸ್.ಪಿ. ತಳವಾರ ಅಧ್ಯಕ್ಷತೆ ವಹಿಸಿದ್ದರು.

ವೈಷ್ಣವಿ ಮಠಪತಿ ಮತ್ತು ಪ್ರೀತಿ ಮಂಗಸೂಳಿ ಪ್ರಾರ್ಥಿಸಿದರು. ಸಾನಿಯಾ ಮೋಮಿನ ಸ್ವಾಗತಿಸಿದರು. ನಿಶಾ ಪವಾರ ವಂದಿಸಿದರು. ರೋಹಣ ಪಡನಾಡ ನಿರೂಪಿಸಿದರು. ಆಡಳಿತ ಮಂಡಳಿಯ ಕಾರ್ಯದರ್ಶಿ ಪ್ರೊ.ಬಿ.ಎ. ಪಾಟೀಲ, ಆಡಳಿತಾಧಿಕಾರಿ ಮೇಜರ್ ವಿ.ಎಸ್. ತುಗಶೆಟ್ಟಿ, ಐಕ್ಯೂಎಸಿ ಸಂಯೋಜಕ ಪ್ರೊ.ಬಿ.ಡಿ. ಧಾಮಣ್ಣವರ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಚಂದ್ರಶೇಖರ ವೈ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎ.ಎ. ಪಾಟೀಲ ಇದ್ದರು.

---

ಕನ್ನಡಪ್ರಭ

# ಪರಂಪರೆ ನಮ್ಮ ಸಾಂಸ್ಕೃತಿಕ ಹೆಗ್ಗುರುತು

## ರಾಜ್ಯ ಮಟ್ಟದ ವಿಶೇಷ ಉಪನ್ಯಾಸದಲ್ಲಿ ಗಜಾನನ ಮನ್ನಿಕೇರಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಕಾಗವಾಡ

ಭಾರತೀಯ ಭಾಷಾ ಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆಯು ಆರ್ಥಿಕ ಸಮೃದ್ಧಿಯೊಂದಿಗೆ, ಆತ್ಮಗೌರವ, ಸ್ವರಾಜ್ಯ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯದ ಮೂಲ ಮಂತ್ರವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಧಾರವಾಡದ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಮನ್ನಿಕೇರಿ ಅಭಿಪ್ರಾಯ ಪಟ್ಟರು.

ಕಾಗವಾಡ ಪಟ್ಟಣದ ಶಿವಾನಂದ ಮಹಾವಿದ್ಯಾಲಯದಲ್ಲಿ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ, ಧಾರವಾಡ ಮತ್ತು ಶಿವಾನಂದ ಮಹಾವಿದ್ಯಾಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ಐಕ್ಯೂಎಸಿ ಪ್ರಾಯೋಜಿತದಲ್ಲಿ ಅರ್ಥಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ ಭಾರತೀಯ ಭಾಷಾಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆಯ ಅಡಿಪಾಯಗಳು, ಜ್ಞಾನ ಮತ್ತು ಜೀವನ ಮೌಲ್ಯಗಳನ್ನು ಅನುಲಕ್ಷಿಸಿ ಎನ್ನುವ ವಿಷಯದ ಕುರಿತು ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಪರಂಪರೆ ಎನ್ನುವುದು ಒಂದು ಸಮಾಜದ ಸಾಂಸ್ಕೃತಿಕ ಹೆಗ್ಗುರುತಾಗಿದ್ದು, ಆಧುನಿಕ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ನಗರೀಕರಣ ಮತ್ತು ಜಾಗತೀಕರಣವು ಪರಂಪರೆಯ ಮೇಲೆ ಮಹತ್ತರವಾದ ಬದಲಾವಣೆಗಳನ್ನು ತರುತ್ತಿವೆ. ಹೀಗಾಗಿ, ಹಿಂದಿನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಅರ್ಥ ಮಾಡಿಸುವ ಅವಶ್ಯಕತೆಯಿದೆ. ಅದಕ್ಕಾಗಿ ನಮ್ಮ ಪೂರ್ವಜರು ಹಾಕಿಕೊಟ್ಟ ದಾರಿಯಲ್ಲಿ ನಾವುಗಳು ಸಾಗಬೇಕು ಎಂದು ಹೇಳಿದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಸಂಶೋಧನಾ ಸಹಾಯಕರಾಗಿರುವ ಡಾ.ಪ್ರತೀಕ ಮಾಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಶೋಧನೆ ಎನ್ನುವುದು ಕೇವಲ ವಿಜ್ಞಾನಕ್ಕೆ ಸಂಬಂಧಪಟ್ಟಿದ್ದಲ್ಲ, ಅದು ಸಾಹಿತ್ಯ ಮತ್ತು ಕಲೆಯನ್ನು ಒಳಗೊಂಡಿದೆ. ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಯನ್ನು ಗೌರವಿಸುವುದು ನಮ್ಮ ಪರಂಪರೆಯಾಗಿದ್ದು, ಭವಿಷ್ಯದಲ್ಲಿ ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಪ್ರಾಚಾರ್ಯ ಡಾ. ಎಸ್.ಪಿ.ತಳವಾರ, ಸಮಾಜದಲ್ಲಿ ಇರುವ ಅನ್ಯಾಯವನ್ನು ತೊಡೆದು ಹಾಕುವ ಕೆಲಸವನ್ನು ಮೌಲ್ಯಗಳು ಮಾಡುತ್ತವೆ. ನಮ್ಮ ಮೌಲ್ಯಗಳನ್ನು ಮತ್ತು ಭಾಷಾ ಪರಂಪರೆಯನ್ನು ನಾವುಗಳು ಉಳಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ವೈಷ್ಣವಿ ಮಠಪತಿ ಮತ್ತು ಪ್ರೀತಿ ಮಂಗಸೂಳಿ ಪ್ರಾರ್ಥಿಸಿದರು. ಸಾನಿಯಾ ಮೋಮಿನ ಸ್ವಾಗತಿಸಿದರು. ನಿಶಾ ಪವಾರ ವಂದಿಸಿದರು. ರೋಹಣ ಪಡನಾಡ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿ ಪ್ರೊ.ಬಿ.ಎ.ಪಾಟೀಲ, ಆಡಳಿತಾಧಿಕಾರಿ ಮೇಜರ್ ವಿ.ಎಸ್.ತುಗಶೆಟ್ಟಿ, ಐಕ್ಯೂಎಸಿ ಸಂಯೋಜಕ ಪ್ರೊ.ಬಿ.ಡಿ.ಧಾಮಣ್ಣವರ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಚಂದ್ರಶೇಖರ. ವೈ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎ.ಎ.ಪಾಟೀಲ ಸೇರಿದಂತೆ ಮಹಾವಿದ್ಯಾಲಯದ ಸಮಸ್ತ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಾಗವಾಡ ಶಿವಾನಂದ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ ಭಾಷಾಜ್ಞಾನ ಪರಂಪರೆಯಲ್ಲಿ ಸ್ವದೇಶಿ ಚಿಂತನೆಯ ಕುರಿತು ಏರ್ಪಡಿಸಿದ ಕಾರ್ಯಕ್ರಮವನ್ನು ಗನಾನನ ಮನ್ನಿಕೇರಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

BELAGAVI RURAL Edition
Mar 23, 2026 Page No. 03
Powered by: erelego.com

April-2025 to March-2026

# CMDR'S Media Coverage

## Special Lecture on Future of Anthropology and Viksit Bharat-2047 – Date-31st March, 2026


ಕನ್ನಡಪ್ರಭ

ದೇಶದ ಅಭಿವೃದ್ಧಿಯಲ್ಲಿ ಮಾನವಶಾಸ್ತ್ರ ಪಾತ್ರ ಹಿರಿದು


ಇಂದು ಮುಂಜಾನೆ

ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಮಾನವಶಾಸ್ತ್ರದ ಪಾತ್ರ ಬಹಳ : ಪ್ರೊ.ಅಜಿತ


ಭಾರತ ವೈಭವ

ದೇಶದ ಅಭಿವೃದ್ಧಿಯಲ್ಲಿ ಮಾನವಶಾಸ್ತ್ರದ ಪಾತ್ರ ಬಹಳ


ಗ್ರಾಮ ಭಾರತ

ವಿಕಸಿತ ಭಾರತದ ಸಾಧನೆಗೆ ಮಾನವಶಾಸ್ತ್ರದ ಪಾತ್ರ ಮಹತ್ವದ್ದು


ಗ್ರಾಮ ಭಾರತ

ಮಾನವಶಾಸ್ತ್ರ ಮತ್ತು ವಿಕಸಿತ ಭಾರತ ಕಾರ್ಯಕ್ರಮ


ಮಾನವಶಾಸ್ತ್ರ ಅಧ್ಯಯನ ಮಹತ್ವದ್ದು


ಸಂಜೆ ದರ್ಪಣ

ಅಭಿವೃದ್ಧಿಯಲ್ಲಿ ಮಾನವಶಾಸ್ತ್ರದ ಪಾತ್ರ ಪ್ರಮುಖ


ಕನ್ನಡ ಜನಶ್ರೀ

ಉಪನ್ಯಾಸ ಮಾಲಿಕೆಯಲ್ಲಿ ಭವಿಷ್ಯತ್ತಿನ ಮಾನವಶಾಸ್ತ್ರ, ವಿಕಸಿತ ಭಾರತ


ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಮಾನವಶಾಸ್ತ್ರದ ಪಾತ್ರ ಅಪಾರ

Published and Owend by Nagendra Kharvi, Published At: INP Road

# CMDR'S Media Coverage

## Special Lecture on 2026-2027 – Economic Survey and Budget Discussion - Date – 31st March, 2026

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ



ಧಾರವಾಡದ ಕ್ಲಾಸಿಕ್ ಪದವಿ ಮಹಾವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ 2026- 27ನೇ ಸಾಲಿನ ಆಯವ್ಯಯ ವಿಶ್ಲೇಷಣೆ ಕಾರ್ಯಕ್ರಮದಲ್ಲಿ ಡಾ. ಎಸ್.ವಿ. ಹನಗೋಡಿಮಠ ಮಾತನಾಡಿದರು.

### ಆಯವ್ಯಯ ವಿಶ್ಲೇಷಣೆ ಕಾರ್ಯಕ್ರಮ

**ಧಾರವಾಡ:** ನಗರದ ಕ್ಲಾಸಿಕ್ ಪದವಿ ಮಹಾವಿದ್ಯಾಲಯದಲ್ಲಿ 2026- 27ನೇ ಸಾಲಿನ ಆಯವ್ಯಯ ವಿಶ್ಲೇಷಣೆ ಕಾರ್ಯಕ್ರಮ ಬುಧವಾರ ಜರುಗಿತು. ಅತಿಥಿಯಾಗಿ ಪಾಲ್ಗೊಂಡಿದ್ದ ಸಿಎಂಡಿಆರ್ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಎಸ್.ವಿ. ಹನಗೋಡಿಮಠ ಅವರು ಕರ್ನಾಟಕದ ಆರ್ಥಿಕ ಸಮೀಕ್ಷೆ, ರಾಜ್ಯದ ಆಯವ್ಯಯದ ಪೂರ್ವ ತಯಾರಿಕೆ ಹಾಗೂ ಹಂಚಿಕೆ ಕುರಿತು ಮಾಹಿತಿ ನೀಡಿದರು.

ಕ್ಲಾಸಿಕ್ ಪದವಿ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಪಿ.ಎಂ. ಹೊನಕೇರಿ ದೈನಂದಿನ ಜೀವನದಲ್ಲಿ ಬಜೆಟ್‌ನ ಮಹತ್ವವನ್ನು ತಿಳಿಸಿದರು. ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಕ್ಲಾಸಿಕ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಲಕ್ಷ್ಮಣ ಎಸ್. ಉಪ್ಪಾರ ಅಧ್ಯಕ್ಷತೆ ವಹಿಸಿದ್ದರು. ಡಾ. ರೇಣುಕಾ ಗೊಡಚಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜಶ್ರೀ ಪ್ರಾರ್ಥಿಸಿದರು. ಎಲ್.ಆರ್. ಅನಿಲ ನಾಯ್ಕ ಸ್ವಾಗತಿಸಿದರು. ತಸ್ಲಿಮ್‌ಬಾನು ಪರಿಚಯಿಸಿದರು. ಸಾಗರ ನಿರ್ವಹಿಸಿದರು. ಕೀರ್ತಿ ಉಪ್ಪಾರ ವಂದಿಸಿದರು.

Hubli Edition
Mar 26, 2026 Page No. 5
Powered by: erelego.com

April-2025 to March-2026

# CMDR'S Media Coverage

## Special Lecture on Benefits of GST for people, businesses, and the government-Date -31ST March, 2026

ಜನದನಿಯ ಸಾರಥಿ
ವಾರ್ತಾ ಭಾರತಿ

# ಜಿಎಸ್ಟಿಯಿಂದ ಗ್ರಾಹಕರ ತೆರಿಗೆ ದರ ಕಡಿಮೆ

### ಸಾಯಿ ಪ್ರಸಾದ



ಆಳಂದ, ಮಾ.30: ಜಿಎಸ್ಟಿ ಸರಕಾರದ ಆದಾಯ ಹೆಚ್ಚಿಸುವ ಮೂಲಕ ವ್ಯಾಪಾರ ಸಂಸ್ಥೆಗಳಿಗೆ ಸುಲಭವಾಗಿ ವ್ಯವಹಾರ ಮಾಡುವ ಅವಕಾಶ ಕಲ್ಪಿಸಿದೆ. ಗ್ರಾಹಕರಿಗೆ ತೆರಿಗೆ ದರವನ್ನು ಕಡಿಮೆ ಮಾಡಿ ಸಹಾಯ ಮಾಡಿದೆ ಎಂದು ನವದೆಹಲಿಯ ಭಾರತ ಸರಕಾರದ ಐಎನ್ಡಿಟಿ, ಸಿಇಎ ಮಾಜಿ ನಿರ್ದೇಶಕ ಸಿಎಚ್ ವಿ ಸಾಯಿ ಪ್ರಸಾದ ಹೇಳಿದ್ದಾರೆ.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗ ಮತ್ತು ವಾಣಿಜ್ಯ ವಿಭಾಗವು ಧಾರವಾಡದ ಬಹುಶಿಸ್ತೀಯ ಸಂಶೋಧನಾ ಕೇಂದ್ರದ (ಸಿಎಂಡಿಆರ್) ಸಹಯೋಗದೊಂದಿಗೆ ಆಯೋಜಿಸಿದ್ದ ಜಿಎಸ್ಟಿ ಜನರಿಗೆ, ವ್ಯವಹಾರಕ್ಕೆ ಮತ್ತು ಸರಕಾರಕ್ಕೆ ಪ್ರಯೋಜನಗಳು ಮತ್ತು ವಿಕಸಿತ ಭಾರತ 2047ರ ಕಡೆಗೆ ಭಾರತದ ಪ್ರಯಾಣ ಕುರಿತ ಸಮ್ಮೇಳನದಲ್ಲಿ ಅವರು ಮಾತನಾಡಿದರು.

"ಜಿಎಸ್ಟಿ ಕ್ಯಾಸ್ಕೇಡಿಂಗ್ ತೆರಿಗೆಗಳನ್ನು ಕಡಿಮೆ ಮಾಡಿದೆ. ಇದು ಬೆಲೆಗಳಲ್ಲಿ ಒಟ್ಟಾರೆ ಕಡಿತಕ್ಕೆ ಕಾರಣವಾಗಿ ಒಂದು ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆ ಸೃಷ್ಟಿಸಿದೆ. ಮಾನವ ರಹಿತ ಎಲೆಕ್ಟ್ರಾನಿಕ್ ತೆರಿಗೆ ವ್ಯವಸ್ಥೆ ಪರಿಚಯಿಸಿ ತೆರಿಗೆ ಆಡಳಿತ ಸರಳಗೊಳಿಸಿದೆ. ತೆರಿಗೆಗಳ ಸಂಖ್ಯೆ ಕಡಿಮೆ ದೇಶೀಯ ಕೈಗಾರಿಕೆಗಳನ್ನು ಸಂರಕ್ಷಿಸಿದೆ ಎಂದು ಹೇಳಿದರು.

ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಒಂದು ರಾಷ್ಟ್ರ ಒಂದು ತೆರಿಗೆ, ಒಂದು ಮಾರುಕಟ್ಟೆ ಸ್ಥಾಪಿಸುವ ಉದ್ದೇಶದಿಂದ 2017ರಿಂದ ಕೇಂದ್ರ ಮತ್ತು ರಾಜ್ಯಗಳ 23 ಪರೋಕ್ಷ ತೆರಿಗೆಗಳನ್ನು ಒಗ್ಗೂಡಿಸಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ತರಲಾಯಿತು. ನಂತರ ಅದರ ಸುಧಾರಣೆ 2.0 ತೆರಿಗೆ ದರಗಳನ್ನು ಶೇ.0, ಶೇ.5, ಶೇ.18 ಮತ್ತು ಶೇ. 40 ಎಂದು ಮರುರೂಪಿಸಲಾಯಿತು ಎಂದರು.

ಈ ಕ್ರಮಗಳ ಮೂಲಕ ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಶಗಳಾದ ಬೇಡಿಕೆ ಮತ್ತು ಪೂರೈಕೆಯ ನಡುವೆ ಸಮತೋಲನ ಸಾಧಿಸಲಾಗುತ್ತಿದ್ದು, ಗ್ರಾಹಕರು ಮತ್ತು ಉತ್ಪಾದಕರ ಹಿತಾಸಕ್ತಿ ಕಾಪಾಡಲಾಗುತ್ತಿದೆ. 2047ರೊಳಗೆ ವಿಕಸಿತ ಭಾರತದ ಗುರಿ ಸಾಧಿಸಲಾಗುವುದು ಎಂದರು.

ಸ್ಕೂಲ್ ಆಫ್ ಬಿಸಿನೆಸ್ ಸ್ಟಡೀಸ್ ಡೀನ್ ಪ್ರೊ. ಪಾಂಡುರಂಗ ಪತ್ತಿ ಮಾತನಾಡಿದರು. ಇದಕ್ಕೂ ಮೊದಲು ಸಮ್ಮೇಳನದ ನಿರ್ದೇಶಕ ಡಾ. ಬಸವರಾಜ ಎಂ.ಎಸ್ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಧಾರವಾಡದ ಬಹುಶಿಸ್ತೀಯ ಸಂಶೋಧನಾ ಕೇಂದ್ರ ಪ್ರತಿನಿಧಿ ಡಾ. ಸಿದ್ದು ವಿ. ಹೊನಗೋಡಿಮಠ, ಸಿಯುಕೆಯ ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗದ ಮುಖ್ಯಸ್ಥೆ ಡಾ. ಸುಮಾ ಸ್ಕೇರಿಯಾ ಮಾತನಾಡಿದರು. ಡಾ. ಗಣಪತಿ ಸಿನ್ನೂರ್, ಡಾ.ಎಂ. ಜೊಹೇರ್, ಡಾ.ಎಸ್.ಲಿಂಗಮೂರ್ತಿ, ಡಾ.ಶಿವಕುಮಾರ್ ಬೆಳ್ಳಿ, ಡಾ.ಸುಜಾತ್ ಎಸ್.ಕೆ, ಡಾ.ಜಿ.ಮಹೇಂದ್ರ, ಡಾ.ಶೈಲಜಾ ಕೊನೆಕ್, ಶರಣಬಸವ ವಿಶ್ವವಿದ್ಯಾಲಯ ಮತ್ತು ಸಿಯುಕೆಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Kalaburagi Edition
Mar 31, 2026 Page No. 2
Powered by: erelego.com

# 'ಡಿಜಿಟಲ್ ತೆರಿಗೆ ವ್ಯವಸ್ಥೆಯಿಂದ ಆಡಳಿತ ಸರಳ'



ಆಳಂದ: ಸಿಯುಕೆಯಲ್ಲಿ ನಡೆದ ಸಮ್ಮೇಳನವನ್ನು ಪ್ರೊ। ಆರ್.ಆರ್. ಬಿರಾದಾರ ಉದ್ಘಾಟಿಸಿದರು.

■ **ಉದಯವಾಣಿ ಸಮಾಚಾರ**

**ಆಳಂದ:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸರ್ಕಾರದ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ವ್ಯಾಪಾರ ಸಂಸ್ಥೆಗಳಿಗೆ ವ್ಯವಹಾರ ಸುಲಭಗೊಳಿಸಿ, ಗ್ರಾಹಕರಿಗೆ ತೆರಿಗೆ ಭಾರವನ್ನು ಕಡಿಮೆ ಮಾಡಿದೆ ಎಂದು ನವದೆಹಲಿಯ ಕೇಂದ್ರ ಸರ್ಕಾರದ ಐಎನ್‌ಡಿಟಿ ಮತ್ತು ಸಿಇಎ ಮಾಜಿ ನಿರ್ದೇಶಕ ಸಿ.ಎಚ್.ವಿ. ಸಾಯಿ ಪ್ರಸಾದ್ ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗ ಹಾಗೂ ವಾಣಿಜ್ಯ ವಿಭಾಗವು ಧಾರವಾಡದ ಬಹುಶಿಸ್ತೀಯ ಸಂಶೋಧನಾ ಕೇಂದ್ರ (ಸಿಎಂಡಿಆರ್) ಸಹಯೋಗದಲ್ಲಿ ಆಯೋಜಿಸಿದ್ದ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಜಿಎಸ್‌ಟಿ ಪರಿಚಯದಿಂದ ಕ್ಯಾಸ್ಕೇಡಿಂಗ್ ತೆರಿಗೆ ಪದ್ಧತಿ ಕಡಿಮೆಯಾಗಿದ್ದು, ಒಟ್ಟಾರೆ ಬೆಲೆ ಇಳಿಕೆಗೆ ಕಾರಣವಾಗಿದೆ. ದೇಶಾದ್ಯಂತ ಒಂದೇ ಸಾಮಾನ್ಯ ಮಾರುಕಟ್ಟೆ ನಿರ್ಮಾಣವಾಗಿದ್ದು, ಸಣ್ಣ ತೆರಿಗೆದಾರರಿಗೆ ಹೆಚ್ಚಿನ ಅನುಕೂಲವಾಗಿದೆ. ಡಿಜಿಟಲ್ ತೆರಿಗೆ ವ್ಯವಸ್ಥೆಯಿಂದ ಆಡಳಿತ ಸರಳಗೊಂಡಿದ್ದು, ತೆರಿಗೆಗಳ ಸಂಖ್ಯೆ ಇಳಿಕೆಯಾಗಿರುವುದರಿಂದ ಕೈಗಾರಿಕೆಗಳಿಗೆ ರಕ್ಷಣೆಯೂ ದೊರೆತಿದೆ ಎಂದರು.

ಸಮ್ಮೇಳನ ಉದ್ಘಾಟಿಸಿದ ಕುಲಸಚಿವ ಪ್ರೊ। ಆರ್. ಆರ್. ಬಿರಾದಾರ ಮಾತನಾಡಿ, ಒಂದು ರಾಷ್ಟ್ರ–ಒಂದು ತೆರಿಗೆ–ಒಂದು ಮಾರುಕಟ್ಟೆ ಉದ್ದೇಶದಡಿ 2017ರಲ್ಲಿ ಜಿಎಸ್‌ಟಿ ಜಾರಿಗೆ ತರಲಾಗಿದೆ. ಕೇಂದ್ರ ಮತ್ತು ರಾಜ್ಯಗಳ 23 ಪರೋಕ್ಷ ತೆರಿಗೆಗಳನ್ನು ಒಗ್ಗೂಡಿಸಲಾಗಿದೆ. ಜಿಎಸ್‌ಟಿ ಸುಧಾರಣೆಗಳ ಪರಿಣಾಮವಾಗಿ ಗ್ರಾಹಕರ ವಿಶ್ವಾಸ ಸೂಚ್ಯಂಕ ಮತ್ತು ಖರೀದಿ ವ್ಯವಸ್ಥಾಪಕರ ಸೂಚ್ಯಂಕ ಎರಡೂ ಸುಧಾರಿಸಿದ್ದು, ಉದ್ಯೋಗ ಸೃಷ್ಟಿ ಉತ್ಪಾದನೆ ಹೆಚ್ಚಳ ಮತ್ತು ಸರಬರಾಜು ಸರಪಳಿ ಬಲಪಡಿಸುವಲ್ಲಿ ನೆರವಾಗಿದೆ ಎಂದು ಅವರು ತಿಳಿಸಿದರು. ಉತ್ಪಾದನಾ ವೆಚ್ಚ ಇಳಿಕೆಯಿಂದ ಸರಕುಗಳ ಬೆಲೆ ಸ್ಥಿರತೆ ಕಂಡುಬಂದಿದ್ದು, ವಿಕಸಿತ ಭಾರತ–2047 ಕನಸಿಗೆ ಇದು ಬಲವಾದ ನೆಲೆ ಎಂದು ಹೇಳಿದರು.

ಸ್ಕೂಲ್ ಆಫ್ ಬಿಸಿನೆಸ್ ಸ್ಟಡೀಸ್‌ನ ಡೀನ್ ಪ್ರೊ। ಪಾಂಡುರಂಗ ಪತ್ತಿ ಮಾತನಾಡಿ, ಜಿಎಸ್‌ಟಿ ಸುಧಾರಣೆಗಳು ವ್ಯವಹಾರ ಪರಿಸರದಲ್ಲಿ ಕಾರ್ಯಾಚರಣಾ ದಕ್ಷತೆಯನ್ನು ಹೆಚ್ಚಿಸಿ, ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಸ್ಪರ್ಧಾತ್ಮಕತೆಯನ್ನು ಬಲಪಡಿಸುತ್ತಿವೆ ಎಂದರು.

ಸಮ್ಮೇಳನದ ನಿರ್ದೇಶಕ ಡಾ। ಬಸವರಾಜ ಎಂ.ಎಸ್. ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಧಾರವಾಡದ ಸಿಎಂಡಿಆರ್‌ ಪ್ರತಿನಿಧಿ ಡಾ। ಸಿದ್ದು ವಿ. ಹೊನಗೋಡಿಮಠ, ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗದ ಮುಖ್ಯಸ್ಥೆ ಡಾ। ಸುಮಾ ಸ್ಕೇರಿಯಾ ಮಾತನಾಡಿದರು. ಡಾ। ಗಣಪತಿ ಬಿ. ಸಿನ್ನೂರ್, ಡಾ। ಎಂ.ಜೋಹೇರ್, ಡಾ। ಎಸ್. ಲಿಂಗಮೂರ್ತಿ, ಡಾ। ಶಿವಕುಮಾರ್ ಬೆಳ್ಳಿ, ಡಾ। ಸುಜಾತ್ ಎಸ್.ಕೆ, ಡಾ। ಜಿ.ಮಹೇಂದ್ರ, ಡಾ। ಶೈಲಜಾ ಕೊನೆಕ್ ಇನ್ನಿತರರಿದ್ದರು.

# CMDR'S Media Coverage

## CMDR News broadcasted by All India Radio

Comments on Union Budget 2026-27
Samachr Darshana – AIR Dharwad Date : 7th Feb 2025

by Dr.S V Hanagodimath, Assistant Professor, CMDR

Comments on Stare Budget - broadcasted on 14th March 2026

by Prof.Basavaprabhu Jirli, Professor and Director. CMDR

Financial devolution to Panchayat Raj institutions, Report submitted to Government of Karnataka- broadcasted on 28th March 2026

by Dr.Basavaprabhu Jirli, Professor and Director. CMDR

Report on Celebration of Dr.B R Ambedkar Jayanti 15th April 2025

by Dr.Basavaprabhu Jirli, Professor and Director. CMDR

Report on release of CMDR Journal of Social Research, special issue in Indian languages-15th April 2025

by Dr.Basavaprabhu Jirli, Professor and Director. CMDR